| ದಿನಾಂಕ 10 ಸೆಪ್ಟೆಂಬರ್ 2013 ಗುಂಡ್ಲು ಪೇಟೆಯ ಶ್ರೀ ರಮೇಶ್ ಹೆಚ್.ವಿ ಎನ್ನುವವರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಸ್ಥಳ ವರ್ಗವಣೆಗಾಗಿ (ರಿಜಿಸ್ಟ್ರೇಷನ್ ಸರ್ಟಿಫಿಕೇಟ್) ಆರ್.ಸಿ ವರ್ಗಾವಣೆಯನ್ನು ಕೋರಿದ್ದರು. ಅವರ ಜಿ.ಎಸ್.ಸಿ ನಂ:- 0012000915877. ಕಾಲಮಿತಿಯಲ್ಲಿ ಸಕಾಲ ಅಧಿನಿಯಮದಡಿ ಕೆಲಸವನ್ನು ಮಾಡಿಕೊಟ್ಟಿರುವುದರಿಂದ ಅರ್ಜಿದಾರರು ಬಹಳ ಖುಷಿ ಪಟ್ಟು ಸಕಾಲದ ಬಗ್ಗೆ ಅವರ ಅನಿಸಿಕೆಯನ್ನು ಈ ರೀತಿ ಹೇಳಿದ್ದಾರೆ. | ದಿನಾಂಕ 23 ಅಕ್ಟೋಬರ್ 2013<br>**ಚಾಮರಾಜ ನಗರ ತಾಲ್ಲೂಕಿನ**<br>**ಶಿವರಾಜ** ಅವರು **ಒಳಾಡಳಿತ ಇಲಾಖೆ**ಯಲ್ಲಿ<br><br>ನಿರಾಪೇಕ್ಷಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಅವರು ಈ ಮೊದಲು ಸಕಾಲದಲ್ಲಿ ಅವರು ಈ ಮೇಲ್ಕಂಡ ವಿಷಯದ ಬಗ್ಗೆ ಅರ್ಜಿಯನ್ನು ಹಾಕಿದ್ದರು ಅರ್ಜಿಯ ವಿವರ ಈ ರೀತಿ ಇದೆ (ಪಿ.ಒ 1116130800687) ಇದು ಜಿ.ಎಸ್.ಸಿ. ಸ್ವೀಕೃತಿ ಸಂಖ್ಯೆ ಯಾಗಿದ್ದು ಅವರು ಇದರಲ್ಲಿ ಅವರು ಯಾವ ದಿನದಂದು ಎನ್.ಒ.ಸಿ. ಕೊಡುತ್ತೆವೆ ಯೆಂದು ಬರೆದಿದ್ದರು. |

| | |
|---|---|
| "ಮೊದಲು ನಾವೆಲ್ಲ ಯಾವುದೇ ಸರಕಾರಿ ಕಛೇರಿಯಲ್ಲಿ, ಏನನ್ನೆ ಕೇಳಿದರೂ ಸಹ ಅವರು ಬಹಳ ನಿಧಾನವಾಗಿ ಕೆಲಸ ಮಾಡಿಕೊಡುತ್ತಿದ್ದರು. ಹಾಗೂ ನಾವು ಕೇಳಿರುವ ಸೇವೆಗಳನ್ನು ಒದಗಿಸಲು ಅವರು ಹಿಂದು ಮುಂದು ನೋಡುತ್ತಿದ್ದರು ಆದರೆ ಈಗ ಈ ಸಕಾಲ ಸೇವೆ ಬಂದಿದ್ದರಿಂದ ಸರಕಾರಿ ಅಧಿಕಾರಿ/ಸಿಬ್ಬಂದಿಗಳು ನಾವು ಕೇಳುವ ಸೇವೆಗಳನ್ನು ಸರಿಯಾದ ಸಮಯಕ್ಕೆ .ಸಮಯ ಬದ್ಧವಾಗಿ ನೀಡುತ್ತಿದ್ದಾರೆ ಹಾಗೂ ಸರಕಾರಿ ನೌಕರರ ವರ್ತನೆ ಮೊದಲಿಗಿಂತ ಉತ್ತಮವಾಗಿದೆ, ಸಕಾಲ ಅಧಿನಿಯಮದ ಸೇವೆಗಳ ನಿರ್ವಹಣೆ ನಮ್ಮ ಮನಸ್ಸಿಗೆ ತೃಪ್ತಿ ತಂದುಕೊಟ್ಟಿದೆ"<br>ರಮೇಶ್ ಎಚ್ ವಿ<br>ಗುಂಡ್ಲು ಪೇಟೆ | ಅದರ ಅನುಸಾರ ಅವರು ಅದೇ ದಿನದಂದು ಅವರ ಅರ್ಜಿಯನ್ನು ಪೂರ್ತಿಯಾಗಿ ನಿರ್ವಹಿಸಿ ಅವರಿಗೆ NOC ಕೊಟ್ಟಿದ್ದಾರೆ. ಇದನ್ನು ಕಂಡ ಅವರು ಹೀಗೆ ಪ್ರತಿಕ್ರಯಿಸಿದ್ದಾರೆ. ಸಕಾಲವು ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದು ಇದರಿಂದ ನಾಗರಿಕರಿಗೆ ತುಂಬಾನೆ ಒಳ್ಳೆಯದಾಗಿದೆ. ಏಕೆಂದರೆ ನಾಗರಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಸಮಾಜದ ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಅದನ್ನು ಸಕಾಲವು ಬಹಳ ಅಚ್ಚುಕಟ್ಟಾಗಿ ನಿಭಾಯಿಸುತ್ತಿದೆ.<br>ಶಿವರಾಜ<br>ಚಾಮರಾಜನಗರ |
| ರಾಯಲ್ ಸ್ಟೋನ್,<br>ಮಂಗಳೂರು<br><br>"ಕೋರಿದ ಸೇವೆ ದೊರೆತಿದೆ, ಡ್ರೈವಿಂಗ್ ಶಾಲೆ ಮುಖಾಂತರ ವಾಹನ ಚಾಲನ ಪರವಾನಿಗೆ ಪಡೆದುಕೊಂಡೆ 'ಸಕಾಲ'ದ ಬಗ್ಗೆ ನನಗೆ ಅರಿವಿಲ್ಲಾ" | ನಿಂಗಾಚಾರ್ ಹೆಚ್ ಎಂ,<br>ಚಿಕ್ಕಮಗಳೂರು,<br>ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು,<br><br>"ಸಕಾಲದ ಬಗ್ಗೆ ಮೊದಲಿನಿಂದ ನನಗೆ ತಿಳಿದಿದೆ, ನಾಗರಿಕರಿಗೆ ಸಕಾಲ ಒಂದು ಅತ್ಯುತ್ತಮ ಅಧಿನಿಯಮವಾಗಿದೆ, ದೂರು ಕೊಟ್ಟರೆ ಪ್ರತಿಕ್ರಿಯಿಸುವುದಿಲ್ಲಾ! ಆದರೆ ಸಕಾಲ ಎಂದು ಹೇಳಿದರೆ ಸರಕಾರಿ ಸಿಬ್ಬಂದಿಗಳು ಉತ್ತಮ ಪ್ರತಿಕ್ರಿಯೆ ನೀಡುತ್ತಿದ್ದಾರೆ" |
| ಮೊಹಮ್ಮದ್ ಸೈಪುಲ್ಲಾ<br>ಹೊಸಕೋಟೆ,<br>ಸಾರ್ವಜನಿಕ ಶಿಕ್ಷಣ ಇಲಾಖೆಯ ಸೇವೆಗಾಗಿ ಕೋರಿದ್ದರು,<br><br>ಅರ್ಜಿದಾರರು ಕೋರಿದ ಸೇವೆಯ ಅರ್ಜಿಯನ್ನು ತಿರಸ್ಕೃತ ಮಾಡಲಾಗಿದೆ, ಇದರಿಂದ ನಾಗರಿಕರು ಕುಪಿತರಾಗಿದ್ದಾರೆ, ಬೇಕಾದ ದಾಖಲೆಗಳ ನಿಖರ ಪಟ್ಟಿಯನ್ನು ನೀಡುವುದಿಲ್ಲ, ಒಂದೊಂದು ಬಾರಿ ಒಂದೊಂದು ದಾಖಲೆ ಬೇಕೆಂದು ಪೀಡಿಸುತ್ತಾರೆ ಹಣ ನೀಡದ ನಾಗರಿಕರಿಗೆ ಸರಕಾರಿ | ಭಾರತ್ ಹೆಚ್ ಪಿ,<br>ತರಿಕೇರೆ,<br>ಜಿಲ್ಲಾ ಕೈಗಾರಿಕಾ ಕೇಂದ್ರ,<br>ಚಿಕ್ಕಮಗಳೂರು,<br><br>"ಸಕಾಲದ ಬಗ್ಗೆ ನನಗೆ ತಿಳಿದಿದೆ, ಸರಕಾರಿ ಸೇವೆ ಪಡೆಯುವಲ್ಲಿ ನಾನು ತೊಂದರೆ ಅನುಭವಿಸಿದೆ ತರಿಕೆರೆ ತಾಲ್ಲೂಕು ಕಛೇರಿ ಹುಣುಸಘಟ್ಟ ಕಾರ್ಪೋರೇಷನ್ ಬ್ಯಾಂಕ್ ನಲ್ಲಿ ಸಾಲಕ್ಕಾಗಿ ಕೋರಿದ್ದೆ ಇದಕ್ಕಾಗಿ 7000/– |

| | |
|---|---|
| ಅಧಿಕಾರಿ ಸಿಬ್ಬಂದಿಗೆ ಇದು ಒಂದು ಕೆಟ್ಟ ಸಂಪ್ರದಾಯವಾಗಿದೆ, ಇದನ್ನು ತೊಡೆದು ಹಾಕಬೇಕು ಸಕಾಲ ಅಧಿನಿಯಮವೇನಜಾರಿಯಲ್ಲಿದೆ, ಆದರೆ ಭ್ರಷ್ಟ ಅಧಿಕಾರಿಗಳು ಇನ್ನೂ ಬಹಳ ಇದ್ದಾರೆ, ಸಂಬಂಧಪಟ್ಟವರ ನಿರಂತರ ಮೇಲ್ವಿಚಾರಣೆ ಅಥವ ತಪಾಸಣೆ ಇಲ್ಲವೆ ಇಲ್ಲ! ವರ್ಷಕ್ಕೆ 4 ಬಾರಿಯಷ್ಟೆ ಕೆಲವೊಂದು ಕಛೇರಿಗಳ ಪರಿಶೀಲನೆ ನಡೆಸುತ್ತಾರೆ. ಇದುವರೆಗೂ ನಾಗರಿಕರ ನೇರ ಮರುಸ್ಪಂದನೆಗೆ ಸ್ಪಂದಿಸುತ್ತಿಲ್ಲಾ. ಎಷ್ಟೋ ಭ್ರಷ್ಟರ ವಿವರಗಳನ್ನು ನೀಡಿದ್ದರು ಸರಕಾರ ಕಠಿಣ ಕ್ರಮ ತೆಗೆದುಕೊಳ್ಳುತ್ತಿಲ್ಲಾ, ಸರಿಯಾದ ಸಾಕ್ಷಿ ಇಲ್ಲವೆಂಬ ಒಂದೇ ಸೋಗಿಗೆ ಪ್ರಕರಣಗಳನ್ನು ಮುಚ್ಚಿಹಾಕುತ್ತಾರೆ, ಇದು ನಮ್ಮ ಸಮಾಜದ ಶೋಚನೀಯ ಪರಿಸ್ಥಿತಿಯಾಗದೆ ಎಂದು ನಾಗರಿಕರು ಬೇಸತ್ತಿದ್ದಾರೆ | ರೂ ಖರ್ಚು ಕೂಡ ಮಾಡಿದ್ದೇನೆ, ಇದುವರೆಗೂ ಸಾಲ ದೊರೆತಿಲ್ಲಾ, ಬ್ಯಾಂಕಿಂಗ್ ಸೇವೆಗಳನ್ನು ಕೂಡ ಸಕಾಲ ಅಧಿನಿಯಮಕ್ಕೆ ಸೇರಿಸಿ" ಎಂದು ಕೋರಿದ್ದಾರೆ, ಮುಂದಿನ ದಿನಗಳಲ್ಲಿ ಸರಕಾರಿ ಸೇವೆ ಪಡೆಯಲು ಅನುಕೂಲವಾಗಲೆಂದು ಸಕಾಲ ಕರೆ ಕೇಂದ್ರದ ಸಂಖ್ಯೆಯನ್ನು ನಮ್ಮ ಸಿಬ್ಬಂದಿಗಳು ಅರ್ಜಿದಾರರಿಗೆ ನೀಡಿದ್ದಾರೆ. |
| ಜಿ ಹೆಚ್. ಮಂಗಳವೇದ,<br>ಬಾಗಲಕೋಟೆ,<br>ಸಾರಿಗೆ ಇಲಾಖೆಯ ಆರ್ ಟಿ ಒ ಕಛೇರಿಗೆ ಸಂಬಂಧಿಸಿದ ಸೇವೆಯ ಬಗ್ಗೆ:<br><br>ಅರ್ಜಿದಾರರು ವಾಹನ ಕಲಿಕ ಪರವಾನಿಗೆಗಾಗಿ ಕೋರಿದ್ದರು "ನಿಗದಿತ ಕಾಲಮಿತಿಯಲ್ಲಿ ಸರಕಾರಿ ಕಛೇರಿಯವರು ಕೋರಿದ ಸೇವೆಯನ್ನು ಒದಗಿಸಿದ್ದಾರೆ, ಮತ್ತೂ ಹೆಚ್ಚು ಹೆಚ್ಚು ಸೇವೆಗಳು ಸಕಾಲದಡಿ ತರುವ ಅವಶ್ಯಕತೆಯಿದೆ" | ಕಿಟ್ಟು ಎಸ್,<br>ಚನ್ನಪಟ್ಟಣ,<br>ಪುರಸಭೆಗೆ ಸಂಬಂಧಿತ ಸೇವೆ:<br><br>"ನನಗೆ ಸಕಾಲದ ಬಗ್ಗೆ ತಿಳಿದಿದೆ, ಒಂದೇ ದಿನದಲ್ಲಿ ಕೋರಿದ ಸೇವೆ ದೊರಕಿತು(ಜನನ ಪ್ರಮಾಣ ಪತ್ರ), ಹಾಗೆಯೇ ಮೊಬೈಲ್ ನಲ್ಲಿ ಸಂದೇಶ ಸಹ ಸಕಾಲಮಂಡಳಿಯವರು ರವಾನಿಸಿದ್ದರು" ಎಂದು ಸಂತಸದಿಂದ ತಿಳಿಸಿದರು |
| ಕಾಳಪ್ಪ ನಾಯ್ಕ,<br>ಕನಕಪುರ,<br>ಕಂದಾಯ ಇಲಾಖೆಯ ಸೇವೆಗಾಗಿ ಕೋರಿದ್ದರು,<br><br>"ಸರಕಾರಿ ಕಚೇರಿಯಿಂದ ಸಕಾಲ ಸೇವೆಯು ಸುಲಭವಾಗಿ ಸಿಕ್ಕಿದೆ, ಕಚೇರಿಯಲ್ಲಿ ಸಕಾಲದ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಿದ್ದರು, ಈಗ ಸಕಾಲದ ಸೇವೆಗಳನ್ನು ಉತ್ತಮವಾಗಿ ನಿರ್ವಹಣೆ ಮಾಡುತ್ತಿದ್ದಾರೆ, | ವನಜಾಕ್ಷಮ್ಮ,<br>ಹಿರಿಯೂರು,<br>ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಭಂದಿತ ಸೇವೆ:–<br><br>"ಬೀದಿ ದೀಪ ನಿರ್ವಹಣೆಗಾಗಿ ಕೋರಿದ್ದೆ, ನಿಗದಿತ ಕಾಲಮಿತಿಯಲ್ಲಿ ನನಗೆ ಸೇವೆ ದೊರಕಿತು, ಸಕಾಲ ಮಂಡಳಿಯ ತಂಡವು ನಾಗರಿಕರನ್ನು ಕರೆ ಮಾಡಿ ಅವರ ಮರುಸ್ಪಂದನೆ ಪಡೆಯುತ್ತಿರುವುದು ಒಂದು ವಿಶೇಷ |

| | |
|---|---|
| ಇದೊಂದು ಉತ್ತಮ ಬೆಳವಣಿಗೆಯಾಗಿದೆ"ಎಂದು ಅರ್ಜಿದಾರರು ತಿಳಿಸಿದರು. | ಸಂಗತಿ ಹಾಗೂ ಉತ್ತಮ ಕಾರ್ಯವೈಖರಿಯಾಗಿದೆ, ಇದರಿಂದ ನಾಗರಿಕರ ಸಲಹೆ, ಕುಂದುಕೊರತೆ ನಿವಾರಣೆ ಸುಲಭ, ಸರಕಾರ ಮತ್ತು ಜನತೆಯ ನಡುವೆ ನೇರ ಸೇತುವಾಗಿ 'ಸಕಾಲ' ನಡೆಯುತ್ತಿರುವುದು ಶ್ಲಾಘನೀಯ" |
| ಆನಂದ ಮೂರ್ತಿ,<br>ಹಿರಿಯೂರು,<br>ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂದಿತ ಸೇವೆ<br><br>"ಸಕಾಲದ ಅಳವಡಿಕೆ ರಾಜ್ಯ ಸರ್ಕಾರದ ಒಂದು ಉತ್ತಮ ಹೆಜ್ಜೆಯಾಗಿದೆ, ಸರಕಾರಿ ಅಧಿಕಾರಿಗಳ ಸ್ಪಂದನೆ /ಸಹಕಾರ ಉತ್ತಮವಾಗಿದೆ, ತ್ವರಿತವಾಗಿ ನಾಗರಿಕರಿಗೆ ಸರಕಾರಿ ಸೇವೆಗಳು ದೊರಕುತ್ತಿರುವುದು ಸಂತಸದ ಸಂಗತಿಯಾಗಿದೆ". | ಈ ಸಕಾಲ ಸೇವೆಯಿಂದಾಗಿ ನಾಗರಿಕರಿಗೆ ಬಹಳ ಒಳ್ಳೆಯದು ಆಗುತ್ತಿದೆ, ಈ ಸಕಾಲ ಸೇವೆ ಶುರುವಾದಗಲಿಂದ ಯಾವುದೇ ನಾಗರಿಕನೂ ಸಹ ಎರಡು ಮೂರು ದಿನಗಳ ತನಕ ಕಛೇರಿಗಳ ಮುಂದೆ ನಿಂತು ನಿಂತು ಬೇಸರ ಪಡುವ ಹಾಗಿಲ್ಲ, ಅರ್ಜಿ ಕೊಟ್ಟ ತಕ್ಷಣ ಸ್ವೀಕೃತಿ ಪತ್ರ ದೊರಕುತ್ತದೆ, ಅದರಲ್ಲಿ ಯಾವ ದಿನದಂದು ಸೇವೆ ದೊರಕುತ್ತದೆ ಎಂಬ ಮಾಹಿತಿ ಇರುತ್ತದೆ, ಇದರಿಂದಾಗಿ ನಮ್ಮ ಸಮಯ ಉಳಿತಾಯವಾಗುತ್ತಿದೆ ಹಾಗೆಯೇ ಕಛೇರಿಯಲ್ಲಿ ಕೆಲಸ ಮಾಡುವ ಸರ್ಕಾರಿ ನೌಕರರಿಗೆ ಒತ್ತಡ ಕಡಿಮೆಯಾಗಿದೆ ಶಿಸ್ತಿನಿಂದ ಉತ್ತಮ ಗುಣಮಟ್ಟದ ಸೇವೆಗಳನ್ನು ನೀಡುವ ಕ್ರಮ ಸಕಾಲವು ಅಳವಡಿಸಿರುವುದು ಶ್ಲಾಘನೀಯ. |
| ಸಿಟಿ ಮೆಡಿಕಲ್ ಹಾಗೂ ಜನರಲ್ ಸ್ಟೋರ್, ರಾಯಚೂರು,<br>ಔಷಧ ನಿಯಂತ್ರಣ ಮಂಡಳಿಗೆ ಸಂಭಂದಿತ ಸೇವೆ:<br><br>"ಕಾಲಮಿತಿಯಲ್ಲಿ ಕೋರಿದ ಸೇವೆ ದೊರೆತಿದೆ (ಔಷದ ಮಳಿಗೆ ಪರವಾನಿಗೆ), ಹೆಚ್ಚಿನ ಹಣವೇನೂ ಕೊಟ್ಟಿಲ್ಲ!ಸುಲಭವಾಗಿ ಸೇವೆ ದೊರೆತಿದೆ" ಎಂದು ಅರ್ಜಿದಾರರು ಸಂತಸ ವ್ಯಕ್ತಪಡಿಸಿದರು. | ಶ್ರೀ ಅಶೋಕ್,<br>ಕೋಲಾರ,<br>ಅಗ್ನಿ ಶಾಮಕ ದಳಕ್ಕೆ ಸಂಬಂದಿಸಿದ ಸೇವೆಗಾಗಿ ಅರ್ಜಿದಾರರು ಕೋರಿದ್ದರು<br>"ಹಸುವೊಂದು ಸಣ್ಣ ಕಾಲುವೆಯಲ್ಲಿ ಬಿದ್ದು ಸಿಲುಕಿಕೊಂಡಿತ್ತು ಅಗ್ನಿ ಶಾಮಕ ದಳದವರಿಗೆ ತಿಳಿಸಿದೆವು ಅವರು ತಕ್ಷಣ ಬಂದು ಹಸುವಿನ ಪ್ರಾಣ ಉಳಿಸಿದರು, ಅಗ್ನಿಶಾಮಕ ದಳ ಹಾಗೂ ಸಕಾಲ ಮಂಡಳಿಗೆ ಕೋಲಾರದ ಜನತೆ ಪರವಾಗಿ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ". |

# ಭಾಗ 3 ಇ

ಚಂದನ ವಾಹಿನಿಯಲ್ಲಿ ದಿನಾಂಕ 6/11/13 ರಂದು ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆವರೆಗೆ ಸಕಾಲದ ಬಗ್ಗೆ ನೇರ ಫೋನ್–ಇನ್ ಕಾರ್ಯಕ್ರಮದಲ್ಲಿ ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಭಾಗವಹಿಸಿರುತ್ತಾರೆ. ಈ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಕಾಲದ ಬಗ್ಗೆ ಮಾಹಿತಿ, ಅಭಿಪ್ರಾಯ, ಅಹವಾಲು ಹಾಗೂ ದೂರುಗಳನ್ನು ಹಂಚಿಕೊಂಡಿರುತ್ತಾರೆ. ಈ ರೀತಿ ಕರೆ ಮಾಡಿದ ನಾಗರಿಕರ ಕೆಲವು ವಿವರಗಳು ಕೆಳಗಿನಂತಿವೆ.

| ಕ್ರಮ ಸಂಖ್ಯೆ | ಹೆಸರು ಶ್ರೀ/ಶ್ರೀಮತಿ | ಜಿಲ್ಲೆ/ನಗರ | ದೂರು |
|---|---|---|---|
| 1 | ಶ್ರೀನಿವಾಸ್ 8185060256 | ಕೋಲಾರ | ಇವರು ಪಡಿತರ ಚೀಟಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದು, 6 ತಿಂಗಳಾದರೂ ಇನ್ನು ಪಡಿತರ ಚೀಟಿ ದೊರೆತಿಲ್ಲವೆಂದು ತಿಳಿಸಿರುತ್ತಾರೆ. |
| 2 | ಪವನ್ 9880724554 ಶ್ರೀ ಮಾರುತಿ ಮೆಡಿಕಲ್ಸ್, ಎಸ್.ಕೆ.ಪಿ. ರಸ್ತೆ, ದಾವಣಗೆರೆ | ದಾವಣಗೆರೆ | ಹೊಸ ಮನೆ ಕಟ್ಟಲು (ಸೆಟ್‌ಬ್ಯಾಕ್ ಪ್ರಕಾರ ಜಾಗ ಬಿಟ್ಟು) ಪರವಾನಗಿ ನೀಡುವಂತೆ ಕೋರಿ ನಗರಪಾಲಿಕೆಗೆ ಅರ್ಜಿ ಸಲ್ಲಿಸಿದ್ದು, ಎಲ್ಲಾ ದಾಖಲಾತಿಗಳನ್ನು ಒದಗಿಸಿದ್ದರೂ ಸಹ ಈವರೆಗೂ ಪರವಾನಗಿ ನೀಡದೇ ಸತಾಯಿಸುತ್ತಿದ್ದಾರೆಂದು ದೂರಿರುತ್ತಾರೆ. |
| 3 | ಎಲ್ಲಪ್ಪ ನಾಗಪ್ಪ ಪೂಜಾರಿ 8095441870 ಚಂದನಹೊಸೂರು ಹಿರೇಬಾಗೇವಾಡಿ ಹೋಬಳಿ, ಬೆಳಗಾಂ ಜಿಲ್ಲೆ. | ಬೆಳಗಾವಿ | ಪಡಿತರ ಚೀಟಿ ಪಡೆಯಲು ಸುಮಾರು 5–6 ವರ್ಷದಿಂದ ತಹಸೀಲ್ದಾರ್, ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗೆ ಓಡಾಡಿರುತ್ತೇನೆ. ಈಗ ಪಡಿತರ ಚೀಟಿ ನೀಡಿದ್ದು ಇದನ್ನು ಪಡೆಯುವ ಸಲುವಾಗಿ ಓಡಾಡಕ್ಕೆ ಸುಮಾರು ರೂ.5,000/– ಖರ್ಚು ಮಾಡಿದ್ದು ಇದನ್ನು ಪಾವತಿ ಮಾಡಿಸಿಕೊಡುವಂತೆ ಕೋರಿರುತ್ತಾರೆ. ಮತ್ತು ತಾನು 3 ವರ್ಷದ ಹಿಂದೆ ಜಿಲ್ಲಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಎಂ.ಎಲ್.ಸಿ. ಪಡೆದಿದ್ದು, ಇದರ ನಿವಾರಣೆಗೆ ಆಸ್ಪತ್ರೆಯಲ್ಲಿ ಔಷಧಗಳನ್ನು ಪಡೆಯುತ್ತಿದ್ದೆ. ಆದರೆ ಆಸ್ಪತ್ರೆಯವರು ದಾಸ್ತಾನು ಇಲ್ಲವೆಂದು ಬೇರೆ ಕಡೆ ಔಷಧಗಳನ್ನು ಪಡೆಯಲು ಸೂಚಿಸುತ್ತಿದ್ದು, ತನಗೆ ದುಡಿಯಲು ಆಗದಿರುವುದರಿಂದ ಔಷಧಗಳನ್ನು ತೆಗೆದುಕೊಳ್ಳಲು ಕಷ್ಟವಾಗುತ್ತಿದೆ ಎಂದು ತಿಳಿಸಿರುತ್ತಾರೆ. |
| 4 | ಬಾಬುರಾವ್ ಕುಲಕರ್ಣಿ 9449535026 ಪ್ರೆಸ್ ರಿಪೋರ್ಟರ್ ನಂ.42, ಕುಲಕರ್ಣಿ ಲೇಔಟ್, ಮಾರುತಿ ಕಾಲೋನಿ, ಬಿಜಾಪುರ. | ಬಿಜಾಪುರ | ಸಕಾಲ ಜಾರಿಯಾದ ನಂತರ ಸರ್ಕಾರಿ ಕಛೇರಿಗಳಲ್ಲಿ ಸಕಾಲ ಅಡಿ ಸೇವೆ ಕೋರಿ ಸಲ್ಲಿಸುವ ಅರ್ಜಿಗಳ ವಿಲೇವಾರಿ ನಿಗದಿತ ಸಮಯದಲ್ಲಿ ಆಗುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಕಾಲಮಿತಿ ನಿಗದಿಯಿಂದ ನೌಕರರಿಗೆ ಜವಾಬ್ದಾರಿ ಬಂದು ಸಕಾಲದಲ್ಲಿ ಸೇವೆ ನೀಡುವಂತಾಗಿದೆ ಎಂದು ತಿಳಿಸಿದರು. |

| | | | |
|---|---|---|---|
| 5 | ರಾಜು ಡಿ.ಎಂ.<br>8105300905<br>ನಂ.27,<br>ಪಾಲನಹಳ್ಳಿ,<br>ಯಲಹಂಕ ಅಂಚೆ,<br>ಬೆಂಗಳೂರು<br>ಉತ್ತರ(ಅಪರ),<br>ಬೆಂಗಳೂರು–64. | ಯಲಹಂಕ | 1985–86 ರಲ್ಲಿ ನಮ್ಮ ತಂದೆ ದೊಡ್ಡಜಂಗಮಪ್ಪ ನವರಿಗೆ ಕಟ್ಟಿಗೇನಹಳ್ಳಿಯಲ್ಲಿ ಸ.ನಂ.28 ರಲ್ಲಿ ಮಂಜೂರಾದ 2.20 ಗುಂಟೆ ಜಮೀನನ್ನು ಅವರ ನಿಧನದ ನಂತರ ತಾಯಿ ನಂಜಮ್ಮರವರಿಗೆ ಪವತಿ ಖಾತೆಯಾಗಿರುತ್ತದೆ. ಜಿಲ್ಲಾಧಿಕಾರಿಗಳು, ಬೆಂಗಳೂರು(ನ) ಇವರು ಸೆಕ್ಷನ್ 136 ಅಡಿ ಪ್ರಕರಣ ದಾಖಲಿಸಿ ಜಮೀನಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರ್ಪಡಿಸಲು ಸೂಚಿಸಿದ ಮೇರೆಗೆ ನಾವು ಎಲ್ಲಾ ಸೂಕ್ತ ದಾಖಲಾತಿಗಳನ್ನು ಹಾಜರ್ಪಡಿಸಿದಾಗ, ಅವರು ಪರಿಶೀಲಿಸಿ ಜಮೀನು ಮಂಜೂರಾಗಿರುವುದು ನಿಜವೆಂದು ಅಭಿಪ್ರಾಯಿಸಿ ಪ್ರಕರಣವನ್ನು ಕೈಬಿಟ್ಟಿರುತ್ತಾರೆ. ಆದರೆ **ಪಹಣಿಯಲ್ಲಿ ಪ್ರಕರಣ ದಾಖಲಾಗಿದೆ** ಎಂದು ನಮೂದಾಗಿದ್ದು ಇದನ್ನು ತೆಗೆಯಲು ಖಾತಾ ಬದಲಾವಣೆಗಾಗಿ 1 ವರ್ಷದ ಹಿಂದ ಬೆಂಗಳೂರು ಉತ್ತರ ತಾಲ್ಲೂಕು ಕಛೇರಿಗೆ ಅರ್ಜಿ ಸಲ್ಲಿಸಿದ್ದು ಇದುವರೆಗೂ ಬದಲಾವಣೆ ಮಾಡಿಕೊಟ್ಟಿಲ್ಲ ಮತ್ತು ಈ ಸಂಬಂಧ ಖುದ್ದು ಜಿಲ್ಲಾಧಿಕಾರಿಗಳು ಸಂಬಂಧಿಸಿದವರಿಗೆ ಆದೇಶ ನೀಡಿದರೂ ಸಹ ಖಾತಾ ಬದಲಾವಣೆ ಮಾಡಿಕೊಟ್ಟಿಲ್ಲ ಎಂದು ದೂರಿರುತ್ತಾರೆ. |
| 6 | ಸುಧಾಕೃಷ್ಣ<br>9480094939<br>ಕೇರಾಫ್ ಡಿ.ವಿ.<br>ನಾರಾಯಣರೆಡ್ಡಿ,<br>4/1,<br>ಚಿಕ್ಕಬಾಳಂದೂರು,<br>ಕಾರ್ಮೆಲ್ಲರಾಂ<br>ಅಂಚೆ, ಬೆಂ.35. | ಸರ್ಜಾಪುರ | 2012 ರಲ್ಲಿ ಕೊಡತಿ ಗ್ರಾಮ ಮುಳ್ಳೂರಿನಲ್ಲಿ ಸ.ನಂ.152/17 ರಲ್ಲಿ 10 ಗುಂಟೆ ಜಮೀನನ್ನು ತಾನು ಮತ್ತು ತನ್ನ ತಮ್ಮ ತೆಗೆದುಕೊಂಡಿದ್ದು, ಈ ಜಮೀನು ನನ್ನ ತಮ್ಮನ ಹೆಸರಿನಲ್ಲಿ ನೋಂದಣಿಯಾಗಿರುತ್ತದೆ. ಈ ಜಮೀನಿನ ಖಾತೆಗೆ ಅರ್ಜಿ ನೀಡಿದ್ದು, ಅದರಲ್ಲಿ ನನ್ನ ಹೆಸರು ಸೇರ್ಪಡೆ ಮಾಡುವುದಕ್ಕೆ ಕಾರ್ಯದರ್ಶಿಯು 1 ಲಕ್ಷ ಲಂಚದ ಬೇಡಿಕೆ ಇಟ್ಟಿದ್ದು, ನಾವು 25 ಸಾವಿರಕ್ಕೆ ಕೇಳಿದಾಗ ಅವರು ಒಪ್ಪಿಕೊಳ್ಳದೇ ಅವರು ಖಾತೆಯನ್ನು ತಮ್ಮನ ಹೆಸರಿಗೆ ಮಾಡಿ, ಭೂ ಸುಧಾರಣೆ ಉಲ್ಲಂಘನೆ ಎಂದು ನಮೂದು ಮಾಡಿ ತಹಸೀಲ್ದಾರ್ ಕಛೇರಿಗೆ ಕಳುಹಿಸಿ ನಂತರ ಉಪ ವಿಭಾಗಾಧಿಕಾರಿಗಳ ಕಛೇರಿಗೆ ಹೋಗಿರುತ್ತದೆ. ತಹಸೀಲ್ದಾರ್ ಕಛೇರಿಯಲ್ಲಿ ಅವರು ಕೇಳಿದ ಎಲ್ಲಾ ದಾಖಲೆಗಳನ್ನು ಹಾಜರ್ಪಡಿಸಿದ್ದೇವೆ. ಈಗ ಎ.ಸಿ.ರವರ ಕಛೇರಿಯಿಂದ ಸಮನ್ಸ್ ಬಂದಿದ್ದು ವಿಚಾರಣೆಗೆ ಹಾಜರಾಗಲು ತಿಳಿಸಿದ್ದು, ಇಲ್ಲದಿದ್ದರೆ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ತಿಳಿಸಿರುತ್ತಾರೆಂದು ದೂರಿರುತ್ತಾರೆ. |
| 7 | ಚಂದ್ರು<br>9731246455<br>ನಂ.5, ಎಸ್.ಎನ್<br>ರಾಜ ಲೇಔಟ್,<br>ಸಮೇತನಹಳ್ಳಿ,<br>ವಯಾ:ಕಾಡುಗೋಡಿ<br>ಬೆಂಗಳೂರು–67. | ಸಮೇತನಹಳ್ಳಿ | ಇವರ ಸಂಬಂಧಿಕರಾದ ಶ್ರೀಮತಿ ಶಾಂತಿ ಸುಂದರರಾಜುರವರು ಸಮೇತಹನಹಳ್ಳಿಯಲ್ಲಿ ಸರ್ವೆ ನಂ. 199 ರಲ್ಲಿ 1 ಗುಂಟೆ ಭೂ ಪರಿವರ್ತನೆಯಲ್ಲದ ಜಮೀನನ್ನು 2011 ರಲ್ಲಿ ಖರೀದಿಸಿ, ಹೊಸಕೋಟೆ ತಾಲ್ಲೂಕು ಕಛೇರಿಯಲ್ಲಿ ಸದರಿ ಜಮೀನಿನ ಖಾತೆಗೆ ಅರ್ಜಿ ಸಲ್ಲಿಸಿದ್ದು, (ರಸೀತಿ ಸಂಖ್ಯೆ: 2645/40502) ಇದುವರೆಗೂ ಖಾತೆ ಮಾಡಿಕೊಟ್ಟಿಲ್ಲ ಮತ್ತು ಅರ್ಜಿ ಯಾವ ಸ್ಥಿತಿಯಲ್ಲಿದೆ ಎಂಬ ಮಾಹಿತಿಯನ್ನು ಸಹ ತಿಳಿಸುತ್ತಿಲ್ಲವೆಂದು ದೂರಿದರು. |
| 8 | ಶಿವಕುಮಾರ್<br>9632523671<br>ಬಿನ್ ಶಿವಯ್ಯ, | ಕುಂದನಹಳ್ಳಿ | • ತಾಲ್ಲೂಕು ಕಛೇರಿಯಲ್ಲಿ 1996 ರಿಂದ 1998 ರವರೆಗೆ ಅಕ್ರಮವಾಗಿ ಮಾಡುತ್ತಿರುವ ಜಮೀನಿನ ಸಾಗುವಳಿಯನ್ನು ಸಕ್ರಮ ಮಾಡುವುದಕ್ಕೆ ಅರ್ಜಿ |

| | | | |
|---|---|---|---|
| | ಕುಂದನಹಳ್ಳಿ, ಮಾಕವಳ್ಳಿ ಅಂಚೆ ಕಸಬಾ ಹೋಬಳಿ, ಕೆ.ಆರ್.ಪೇಟೆ(ತಾ) ಮಂಡ್ಯ ಜಿಲ್ಲೆ | | ತೆಗೆದುಕೊಂಡಿದ್ದು, ಈವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂದು ದೂರಿರುತ್ತಾರೆ.<br>• ಬಿ.ಬಿ.ಕ್ಯಾನಲ್ ಪ್ಲಾಟ್‌ಫಾರಂನಲ್ಲಿ 350 ಹೆಕ್ಟೇರ್ ಇದ್ದು, ಇದರಲ್ಲಿ ಅನುಭವದಾರರು ಉಳುಮೆ ಮಾಡುತ್ತಿದ್ದಾರೆ. ಆದರೆ ಸರ್ಕಾರದವರು 2001 ರಲ್ಲಿ ಸದರಿ ಜಮೀನನ್ನು ಭಾಗಗಳನ್ನಾಗಿ ಮಾಡುವಂತಿಲ್ಲ ಮತ್ತು ಬೇರೆಯವರಿಗೆ ಮಾರಾಟ ಮಾಡಬಾರದು ಮತ್ತು ಕೊಂಡುಕೊಳ್ಳಬಾರದೆಂದು ಆದೇಶ ಮಾಡಿರುವುದರಿಂದ ನಾವು ಜಮೀನನ್ನು ಭಾಗ ಮಾಡಿಕೊಳ್ಳು ಆಗುತ್ತಿಲ್ಲವೆಂದು ಇದಕ್ಕೆ ಪರಿಹಾರ ಒದಗಿಸಬೇಕೆಂದು ಕೋರಿರುತ್ತಾರೆ. |
| 9 | ರಾಮಕೃಷ್ಣ<br>8710835693<br>89/1, ಕಲ್ಕೆರೆ, ಎಎಂಸಿ ಕಾಲೇಜು ಹತ್ತಿರ, ಬನ್ನೇರುಘಟ್ಟರಸ್ತೆ, ಬೆಂಗಳೂರು-83 | ಜಯನಗರ | ಇವರು ಸ್ವಯಂಸೇವಕರಾಗಿ ಸೇವೆ ಸಲ್ಲಿಸುತ್ತಿದ್ದು, ವಿವಿಧ ಇಲಾಖೆಗಳ (ಉದಾ: ಪೋಲೀಸ್, ಆರೋಗ್ಯ, ಲೋಕೋಪಯೋಗಿ, ಆಹಾರ ಇಲಾಖೆ ಇತ್ಯಾದಿ) ಸೇವೆಗಳನ್ನು ಪಡೆಯುವಾಗ ಅನ್ಯಾಯವಾದರೆ ಅಂತಹ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ದೂರು ಕೊಟ್ಟರೆ, ದೂರು ನೀಡಿದವರ ಮೇಲೆಯೇ ಆಕ್ರಮಣ ಮಾಡಿಸುತ್ತಿದ್ದು, ಅವರಿಗೆ ರಕ್ಷಣೆ ಇಲ್ಲವಾಗಿದೆ ಎಂದು ತಿಳಿಸಿದರು. ತಪ್ಪು ಮಾಡಿದ ಪ್ರತೀ ನೌಕರರಿಗೆ ಕೇವಲ ಅಮಾನತ್ತು ಮಾಡಿದರೆ ಅವರು ಸುಲಭವಾಗಿ ಅಮಾನತ್ತು ತೆರವುಗೊಳಿಸಿಕೊಂಡು ಕೆಲಸಕ್ಕೆ ಹಾಜರಾಗುತ್ತಾರೆ. ಆದ್ದರಿಂದ ಅವರಿಗೆ ಗರಿಷ್ಠ ಮಟ್ಟದ ಶಿಕ್ಷೆ ವಿಧಿಸಿದರೆ ಈ ರೀತಿಯ ಬೆಳವಣಿಗೆ ತಡೆಗಟ್ಟಬಹುದೆಂದು ಸಲಹೆ ನೀಡಿರುತ್ತಾರೆ. |
| 10 | ಪುಟ್ಟಸ್ವಾಮಿ<br>08276-242042<br>ಹೆಬ್ಬುಲ್ಸೆ ಗ್ರಾಮ ಹಂಡ್ಲಿ ಅಂಚೆ ವಯಾ:ಶನಿವಾರಸಂತೆ, ಸೋಮವಾರ ಪೇಟೆ ತಾಲ್ಲೂಕು, ಕೊಡಗು | ಶನಿವಾರಸಂತೆ | ಇವರು ಪೋಲೀಸ್ ಇಲಾಖೆಯಲ್ಲಿ ಅಸಿಸ್ಟಂಟ್ ಸಬ್ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸಿ 2007 ರಲ್ಲಿ ನಿವೃತ್ತರಾಗಿರುತ್ತಾರೆ. ಈ ಸಮಯದಲ್ಲಿ ತನಗೆ ನಿಗದಿ ಮಾಡಿದ್ದ ನಿವೃತ್ತಿ ವೇತನ ಸರಿಯಿಲ್ಲ ಎಂದು ಮನವಿ ಮಾಡಿದ್ದು, ಕ್ರಮ ಕೈಗೊಂಡಿಲ್ಲ. ಮತ್ತು 2011 ರಲ್ಲಿ ಐ.ಜಿ ಮತ್ತು ಎಸ್.ಪಿ. ತುಮಕೂರು, ರವರಿಗೆ ನಿವೃತ್ತಿ ವೇತನವನ್ನು ಸರಿಯಾಗಿ ನಿಗದಿಪಡಿಸಿಕೊಡುವಂತೆ ಅಥವಾ ಹಿಂಬರಹ ನೀಡಿ ಎಂದು ಅರ್ಜಿ ಸಲ್ಲಿಸಿದೆ. ಈ ಬಗ್ಗೆ ತುಮಕೂರು ಜಿಲ್ಲಾ ಎಸ್.ಪಿ. ಕಚೇರಿಯಲ್ಲಿ ವಿಚಾರಿಸಲಾಗಿ ಅವರು ನಾನು ನೀಡಿದ್ದ ದೂರಿನ ಅರ್ಜಿ ಇಲ್ಲವೆಂದು ತಿಳಿಸಿದಾಗ ನಾನು ಮತ್ತೆ ಅರ್ಜಿಯ ನಕಲುಗಳನ್ನು ಅವರಿಗೆ ಸಲ್ಲಿಸಿದ್ದು, ನಿವೃತ್ತಿ ವೇತನವನ್ನು ಸರಿಯಾಗಿ ನಿಗದಿ ಮಾಡಿಸಿಕೊಡುವಂತೆ ಕೋರಿರುತ್ತಾರೆ. |

# ಭಾಗ 3 ಎಫ್

## ಸಕಾಲ ಮಿತ್ರ

**ಧ್ಯೇಯೋದ್ಧೇಶಗಳು**

- ಎಲ್ಲಾ ಗ್ರಾಮ ಹಾಗೂ ತಾಲ್ಲೂಕುಗಳಲ್ಲಿ ಸಕಾಲದ ಬಗ್ಗೆ ಸ್ವಂ ಸೇವಕರಿಂದ ಜಾಗೃತಿ ಮೂಡಿಸುವುದು.
- ತರಬೇತಿಯಿಂದ ಈ ಸ್ವಯಂ ಸೇವಕರ (ಸಕಾಲ ಮಿತ್ರ)ಒಂದು ಕೇಂದ್ರ ಗುಂಪನ್ನು ರಚಿಸಿ, ಅವರಿಗೆ ಸೂಕ್ತ ತರಬೇತಿ ನೀಡಿ ಕರ್ನಾಟಕ ರಾಜ್ಯದ್ಯಾಂತ ಸಕಾಲದ ಬಗ್ಗೆ ಜಾಗೃತಿ ಮೂಡಿಸುವುದು.
- ಸಕಾಲ ಮಿತ್ರ ಗುಂಪುಗಳ ಪ್ರಕ್ರಿಯೆಯನ್ನು ಗುರುತಿಸಿ ಒಂದೇ ತೆರನಾದ/ನಿರ್ದಿಷ್ಟಮಾನವಾದ ಕಾರ್ಯವೈಖರಿಯಲ್ಲಿ ತೊಡಗಿಸುವುದು.
- ಯುವಕರಿಗೆ ಹಾಗೂ ಹಿರಿಯ ನಾಗರಿಕರಿಗೆ , ಎಲ್ಲಾ ಜನ ವರ್ಗಕ್ಕೆ ಪ್ರತ್ಯೇಕವಾಗಿ ವೇದಿಕೆ ಒದಗಿಸಿ, ಪ್ರಜಾಪ್ರಭುತ್ವ ಆಡಳಿತೆ ಪ್ರಕ್ರಿಯೆಯಲ್ಲಿ ಭಾಗೀದಾರರಾಗಿಸುತ್ತಾ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಜವಾಬ್ದಾರಿಯುತ ಮಾಡಿಸಲು ಶ್ರಮಿಸುವುದು.

**ಕಾಲ ನಿರ್ಧರಣೆ:**

ಪ್ರಥಮ ಹಂತದ ಕಾಲ ಮಿತಿ ಒಂದು ವರ್ಷವೆಂದು ಯೋಜಿಸಲಾಗಿದೆ. ತದ ನಂತರ ಸಮರ್ಥವಾಗಿ ಅನುಷ್ಠಾನಗೊಳಿಸಗುವುದು.

**ರಚನಾತ್ಮಕ ಕಾರ್ಯಕ್ರಮ**

- ಒಟ್ಟಾರೆ ಎಲ್ಲಾ ತಾಲ್ಲೂಕುಗಳಲ್ಲಿ 200–300 ಸಕಾಲ ಮಿತ್ರರನ್ನು ನೇಮಕಾತಿ ಮಾಡುವುದು.
- ಈಗಾಗಲೇ ಕಾರ್ಯನಿರತವಾಗಿರುವ ಸಹಾಯಕೇಂದ್ರಗಳನ್ನು ಈ ನಿಟ್ಟಿನಲ್ಲಿ ಪ್ರಾಥಮಿಕವಾಗಿ ತೊಡಗಿಕೊಳ್ಳಬಹುದು.
- ಈ ಸಕಾಲ ಮಿತ್ರ ಸುಮಾರು 10 ಜಿಲ್ಲೆಗಳಲ್ಲಿ “ರಾಷ್ಟ್ರ” ಎಂಬ ಒಂದು ಸ್ವಂ ಸೇವಾ ಸಂಸ್ಥೆಯನ್ನು ಹುಟ್ಟುಹಾಕಬಹುದು.
- ನೈಪುಣ್ಯರಾದ ಒಂದು ಸಕಾಲ ಮಿತ್ರ ರನ್ನು ಗುರುತಿಸಿ ಅವರನ್ನೂ ರಾಜ್ಯದ ಎಲ್ಲಾ ತಾಲ್ಲೂಕುಗಳ ಸ್ವಂ ಸೇವಕರ ನಾಯಕರನ್ನಾಗಿ ಗುರುತಿಸುವುದು.

- ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರು ಈ ಸಕಾಲ ಮಿತ್ರ ರು ಆರಿಸುವಲ್ಲಿ ಮಹತ್ತರವಾದ ಪಾತ್ರ ವಹಿಸಿರುತ್ತಾರೆ.
- ಮಾಹೆಯಾನ ಒಂದು ಬಾರಿ ಸಕಾಲ ಮಂಡಳಿಯು ಈ "ಸಕಾಲ ಮಿತ್ರ"ರನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಒಟ್ಟಾರೆ ಕಾರ್ಯನಿರ್ವಹಣೆಯನ್ನು ಸಮಾಲೋಚಿಸುವುದು.
- "ಲೋಕ್ ಅದಾಲತ್' ತೆರನಾಗಿ ಪ್ರತಿಜಿಲ್ಲೆಯಲ್ಲಿ "ಸಕಾಲ ಹಬ್ಬ" ಎಂಬ ಒಂದು ಕಾರ್ಯಕ್ರಮವನ್ನು ಆಯೋಜಿಸಿ, ಅದರಲ್ಲಿ ಮಂಡಳಿ ಹಾಗೂ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ನಾಗರಿಕರ ಜೊತೆ ಸಂವಾಹನೆ ನಡೆಸಲಾಗುವುದು.

**"ಸಕಾಲ ಮಿತ್ರ"ರ ಆದ್ಯ ಕರ್ತವ್ಯಗಳು**

- ನಾಗರಿಕರಿಗೆ ಕಛೇರಿ ಹಾಗೂ ಆನ್ ಲೈನ್ ಮುಖಾಂತರ ಸಕಾಲ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಸಹಕರಿಸುವುದು.
- ಕಾರ್ಯವೈಖರಿಯ ಪಟ್ಟಿಯನ್ನು ತಯಾರಿಸಿ, ಪತ್ರಿ ಸೇವೆಯನ್ನು ಕಾರ್ಯ ವೈಖರಿ ಪಟ್ಟಿಯ ಜೊತೆಗೆ ಹೋಲಿಕೆ ಮಾಡಿ ಸರಳತೆಯನ್ನು ತರಲು ಮಂಡಳಿಗೆ ಸಹಕರಿಸುವುದು.

10ನೇ ತರಗತಿ, 12ನೇ ತರಗತಿ ಉತ್ತೀರ್ಣರಾದ, ಕಂಪ್ಯೂಟರ್ ಜ್ಞಾನವುಳ್ಳ ಯಾವುದೇ ವ್ಯಕ್ತಿಯು ಇದರಲ್ಲಿ ತೊಡಗಿಸಿಕೊಳ್ಳಬಹುದು.

ಕಾರ್ಯವೈಖರಿ ಗುರುತಿಸಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವವರನ್ನು ಸಕಾಲ ಮಂಡಳಿಯ ಮುಖ್ಯಸ್ಥರಿಂದ ಪುರಸ್ಕರಿಸಲಾಗುವುದು.

# ಅಧ್ಯಾಯ – 4

# ಘಟನಾವಳಿಗಳು ಹಾಗೂ ಪತ್ರಿಕ ವರದಿ

## 1) ಬೆಂಗಳೂರು, ಅಕ್ಟೋಬರ್ 29: <u>ಮುಂದಿನ ನಾಲ್ಕು ತಿಂಗಳಲ್ಲಿ ಸಕಾಲಕ್ಕೆ ಐ.ಎಸ್.ಒ ಮಾನ್ಯತೆ:</u>

ಸಕಾಲ ಯೋಜನೆಯಡಿ ನೀಡಲಾಗುತ್ತಿರುವ ಸೇವೆಗಳಿಗೆ ಐ.ಎಸ್.ಒ 9001 ಪ್ರಮಾಣಪತ್ರ ವನ್ನು ಮುಂದಿನ ನಾಲು ತಿಂಗಳಲ್ಲಿ ನೀಡಲಾಗುವುದೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀ ಎಸ್.ವಿ.ರಂಗನಾಥ್ ತಿಳಿಸಿದರು.

ಅವರು ಇಂದು ಸಕಾಲ ಯೋಜನೆಯ ಸೆಪ್ಟೆಂಬರ್ ಮಾಹೆಯ ವರದಿಯನ್ನು ಬಿಡುಗಡೆ ಮಾಡಿ ಮಾತನಾಡುತ್ತಾ ಈ ವಿಷಯ ತಿಳಿಸಿದರು.



ಭಾರತೀಯ ಗುಣಮಟ್ಟ ಮಂಡಳಿಯ ತಂಡವೊಂದು ಭಾರತ ಸರ್ಕಾರದ ಸಚಿವಾಲಯದ ಕಾರ್ಯಕ್ಷಮತಾ ನಿರ್ವಹಣಾ ತಂಡದ ನೆರವು ಪಡೆದು ಐ.ಎಸ್.ಒ ಪ್ರಮಾಣಪತ್ರ ಗಳಿಸಲು ನೆರವು ನೀಡಲಿದೆ. ಮೊದಲ ಹಂತದಲ್ಲಿ ಕಂದಾಯ, ಸಾರಿಗೆ, ಆಹಾರ, ವಾಣಿಜ್ಯ ತೆರಿಗೆ ಮತ್ತು ನಗರಾಭಿವೃದ್ಧಿ ಇಲಾಖೆಗಳನ್ನು ಒಳಗೊಳ್ಳಲಿದೆ ಎಂದು ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಕಾಲ ಮಿಷನ್ ನಿರ್ದೇಶಕರಾದ ಡಾ: ಶಾಲಿನಿ ರಜನೀಶ್ 'ಸಕಾಲದ ಆನ್‌ಲೈನ್ ಸೇವೆಗಳು ಪ್ರಾರಂಭವಾದಾಗಿನಿಂದ, ಸೈಬರ್ ಕಫೆಗಳನ್ನು ಆರಂಭಿಸಲು ಸುಮಾರು 3000 ಅರ್ಜಿಗಳು ಸ್ವೀಕೃತವಾಗಿದ್ದು, ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಅನುಮೋದನೆಯ ವಿವಿಧ ಹಂತದಲ್ಲಿದೆ' ಎಂದರು.

'ಸೆಪ್ಟೆಂಬರ್ ಮಾಹೆಯಲ್ಲಿ ಸಕಾಲ ಸೇವೆಗಳನ್ನು ನೀಡುವಲ್ಲಿ ಸುಧಾರಣೆ ಕಂಡುಬಂದಿದೆ. 7 ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಚೇರಿಗಳ ಸಂಖ್ಯೆಯ 1491 ರಿಂದ 548 ಗೆ ಇಳಿಮುಖವಾಗಿದೆ. ಅದೇ ರೀತಿ ಯಾವುದೇ ವಿಳಂಬವಿಲ್ಲದೆ ಸೇವೆ ಒದಗಿಸುವ ಶೂನ್ಯ ವಿಳಂಬ ಇರುವ ಕಚೇರಿಗಳ ಸಂಖ್ಯೆಯಲ್ಲಿಯೂ ಏರಿಕೆ ಕಂಡಿದೆ. 1090 ಕಚೇರಿಗಳು ವಿಳಂಬವಿಲ್ಲದೆ ಸೇವೆಗಳನ್ನು ಒದಗಿಸಿವೆ. ಕಳೆದ ಎರಡು ತಿಂಗಳಲ್ಲಿ ಆಗಿರುವ ಉತ್ತಮ ಬೆಳವಣಿಗೆ ಇದಾಗಿದೆ' ಎಂದು ತಿಳಿಸಿದರು.

'ಸೆಪ್ಟೆಂಬರ್ ತಿಂಗಳ ಅಂತ್ಯದಲ್ಲಿ ಸ್ವೀಕೃತವಾದ 3,48,15,736 ಅರ್ಜಿಗಳಲ್ಲಿ 3,39,09,912 ಅರ್ಜಿಗಳನ್ನು ವಿಲೇ ಮಾಡಲಾಗಿದ್ದು, 93 ಅರ್ಜಿಗಳು ಬಾಕಿ ಇವೆ. ಈವರೆಗೆ 207 ಪ್ರಕರಣಗಳಲ್ಲಿ ಪರಿಹಾರ ಶುಲ್ಕವನ್ನು ನೀಡಲಾಗಿದೆ.

ಚಿಕ್ಕಬಳ್ಳಾಪುರ, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳು ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಪಡೆದರೆ, ಚಿಕ್ಕಮಗಳೂರು, ಯಾದಗಿರಿ ಮತ್ತು ಬೆಂಗಳೂರು ಜಿಲ್ಲೆಗಳು ಕ್ರಮವಾಗಿ 28, 29 ಮತ್ತು 30 ನೇ ಸ್ಥಾನಗಳಿಸಿಕೊಂಡಿವೆ' ಎಂದು ಡಾ: ಶಾಲಿನಿ ರಜನೀಶ್ ಹೇಳಿಸಿದರು.

ಸಭೆಯಲ್ಲಿ ನಿಯೋಜಿತ ಮುಖ್ಯ ಕಾರ್ಯದರ್ಶಿ ಶ್ರೀ ಕೌಶಿಕ್ ಮುಖರ್ಜಿ, ಎಲ್ಲ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ವಿವಿಧ ಇಲಾಖೆಗಳ ಮುಖ್ಯಸ್ಥರು ಹಾಜರಿದ್ದರು.

**2) ಕರ್ನಾಟಕ ವಿಧಾನ ಪರಿಷತ್ತುಮತ್ತು ಕರ್ನಾಟಕ ವಿಧಾನಸಭೆಗೆ ಪ್ರಥಮವಾಗಿ ಆಯ್ಕೆಯಾಗಿರುವ ಶಾಸಕರುಗಳಿಗೆ ದಿನಾಂಕ: 25ಹಾಗೂ 26.10.2013ರಂದು ನಡೆದ ತರಬೇತಿ ಶಿಬಿರ:**

25ನೇ ಹಾಗೂ 26ನೇ ಅಕ್ಟೋಬರ್ ನಯ ನೂತನ ಶಾಸಕರುಗಳಿಗೆ ತರಬೇತಿ ಕಾರ್ಯಕ್ರಮ ಸರ್ಕಾರವು ಹೊಸತಾಗಿ ಆಯ್ಕೆಯಾದ ಶಾಸಕರುಗಳಿಗೆ ಸಕಾಲ ಮಾಹಿತಿ ಹಕ್ಕು ಅಧಿನಿಯಮ ಮುಂತಾದ ಅಧಿನಿಯಮಗಳ ಕುರಿತಂತೆ ತರಬೇತಿ ನೀಡಲು ಯೋಜಿಸಿತ್ತು. ಈ ಕಾರ್ಯ ಕ್ರಮವನ್ನು ಮಾನ್ಯಮುಖ್ಯ ಮಂತ್ರಿಗಳು ಉದ್ಘಾಟಿಸಿದರು ಜೊತೆಗೆ ಕಾಯ್ಕ್ರಮದಲ್ಲಿ ಹಿರಿಯ ಸಚಿವರು ಹಾಗೂ ಸಂಸದರು ಉಪಸ್ಥಿತರಿದ್ದರು. ಭಾಷಣದ ನಂತರ ಹಲವಾರು ಪ್ರಶ್ನೆಗಳು ಮೂಡಿದವು. ಅವುಗಳಿಗೆ ಉತ್ತ ನೀಡಲಾಯಿತು. ಉದಾ. ಆದಾಯ ಪತ್ರದೊಂದಿಗೆ ಜಾತಿ ಪ್ರಮಾಣ ಪತ್ರ ನೀಡಲು ಸಮಸ್ಯೆಯಿದೆಯೇ? ಇದಕ್ಕೆ ಹಲವಾರು ಕಾರಣಗಳಿರುವುದರಿಂದ ಸಾಧ್ಯವಾಗಲಾರದು ಎಂಬುದು ಕ್ಷೇತ್ರ ಇಲಾಖೆಗಳಲ್ಲಿ ಸಕಾಲದಡಿ ಸೇವೆಗಳನ್ನು ಯಥೋಚಿತವಾಗಿ ನೀಡುತ್ತಿರುವ ಬಗ್ಗೆ ತಪಾಸಣೆಗಳನ್ನು ನಡೆಸಲಾಗಿದೆಯೆ? ಸಕಾಲದಡಿ ಸೇವೆ ನೀಡಲು ಹಿಂಜಿಯುತ್ತಿರಲು ಅಥವಾ ವಿಳಂಬ ಸೇವೆ ನೀಡುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಂಸದೀಯರು ಅಭಿಪ್ರಾಯ ಪಟ್ಟರು.



ನೂತನವಾಗಿ ನೇಮಕವಾಗಿರುವ ಶಾಸಕರುಗಳಿಗೆ ತರಬೇತಿ ಕಾರ್ಯಕ್ರಮ ದೃಶ್ಯ

ಸಕಾಲ ಮಂಡಳಿ ನಿರ್ದೇಶಕರು ಹಾಗೂ ಸರ್ಕಾರದ ಕಾರ್ಯದರ್ಶಿಗಳು, ಸಿಆಸುಇ (ಆಸು) ಇವರು ಶಿಬಿರದಲ್ಲಿ ಹಾಜರಿದ್ದ ಎಲ್ಲಾ ಮಾನ್ಯ ಶಾಸಕರನ್ನು ಸ್ವಾಗತಿಸುತ್ತಾ, ಮೊದಲು ತರಬೇತಿಯಲ್ಲಿ ಸಕಾಲ ಅಧಿನಿಯಮ ಹೇಗೆ ಜಾರಿಗೆ ಬಂತು ಅದರ ವೈಶಿಷ್ಟ್ಯಗಳೇನು? ಎಂಬುದನ್ನು ಸಭೆಗೆ ವಿವರಿಸಿದರು ಹಾಗೂ ಸಕಾಲ ಚಿಹ್ನೆ ಹಾಗೂ ಘೋಷಣಾ ವಾಕ್ಯ ಆಯ್ಕೆಯ ಬಗ್ಗೆ ನೆರೆದಿದ್ದ ಮಾನ್ಯ ಶಾಸಕರುಗಳಿಗೆ ವಿವರಿಸಿದರು.

ಸಕಾಲದ ಬಗ್ಗೆ ಒಂದು ಪ್ರಾತ್ಯಕ್ಷಿಕೆಯನ್ನು ನೀಡಿ ಸಕಾಲ ಕಾಯ್ದೆ ಜಾರಿಗೆ ಬಂದ ದಿನದಿಂದ ಇದುವರೆಗೆ ನಡೆದು ಬಂದ ರೀತಿ ಹಾಗೂ ಸಕಾಲ ಅಧಿನಿಯಮದ ಬಗ್ಗೆ ಶಾಸಕರ ಪಾತ್ರವನ್ನು ಮಾನ್ಯ ಶಾಸಕರಿಗೆ ಡಾ॥ ಶಾಲಿನಿ ರಜನೀಶ್ – ಸಕಾಲ ನಿರ್ದೇಶಕರು ಪ್ರಾತ್ಯಕ್ಷಿಕೆಯ ಮೂಲಕ ವಿವರಿಸಿದರು.

- ❖ ಮಾನ್ಯ ಶಾಸಕರು ಜಾತಿ ಪ್ರಮಾಣ ಪತ್ರದ ಸಿಂಧುತ್ವವನ್ನು ಕುರಿತು ಕೆಲವೊಂದು ಪ್ರಶ್ನೆಗಳನ್ನು ಕೇಳುತ್ತಾ, ಸದರಿ ಜಾತಿ ಪ್ರಮಾಣ ಪತ್ರದ ಜೊತೆಗೆ ಆದಾಯ ಪತ್ರವನ್ನು ಜೀವನಪರ್ಯಂತ ನೀಡುವ ಬಗ್ಗೆ ಪರಾಮರ್ಶಿಸಲು ತಿಳಿಸಿದರು.
- ❖ ಹಲವಾರು ಸೇವೆಗಳು ನಿಗದಿತ ಕಾಲಮಿತಿಗಿಂತ ಮೊದಲೇ ನಿರ್ವಹಣೆಯಾಗುತ್ತಿದ್ದು, ನಾಗರಿಕರಿಗೆ ಅನುಕೂಲವಾಗಲು ನಿಗದಿತ ಕಾಲಮಿತಿಯನ್ನು ಇಳಿಸುವ ನಿಟ್ಟಿಯಲ್ಲಿದ್ದೇವೆ ಈ ಬಗ್ಗೆ ಇಲಾಖೆಗಳ ಜೊತೆ ಚರ್ಚೆ ಮಾಡಿದ್ದೇವೆ ಎಂದು ಸಕಾಲ ನಿರ್ದೇಶಕರು ತಿಳಿಸಿದರು.
- ❖ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಸೇವೆಗಳನ್ನು ನೀಡುವಲ್ಲಿ ಹಲವಾರು ತೊಂದರೆಗಳಿರುವುದಾಗಿ ತಿಳಿಸಿದರು ಹಾಗೂ ಸದರಿ ಗ್ರಾಮೀಣ ಪ್ರದೇಶಗಳಿಗೆ ಕ್ಷೇತ್ರ ಭೇಟಿ ಅತಿ ಅವಶ್ಯಕವಿರುವುದೆಂದು ತಿಳಿಸುತ್ತಾ, ಕಛೇರಿಗಳಿಗೆ ಆಕಸ್ಮಿಕ ತಪಾಸಣೆ ನಡೆಸುವಂತೆ ಮಾನ್ಯ ಶಾಸಕರುಗಳು ಸೂಚಿಸಿದರು. ಇದರಿಂದ ನಿಖರವಾಗಿ ಆಗುತ್ತಿರುವ ತೊಡಕುಗಳನ್ನು ತೊಡೆದು ಹಾಕಬಹುದು. ಇದಲ್ಲದೇ, ಸಂಬಂಧಪಟ್ಟ ಕಛೇರಿ/ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಕ್ರಮ ಕೈಗೊಂಡಿರುವ ಬಗ್ಗೆ ನಿರಂತರವಾಗಿ ಮೇಲ್ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕಾರ್ಯದರ್ಶಿಯವರಿಗೆ ಕೋರಿದರು.
- ❖ ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ಇವರು ಮಾತನಾಡುತ್ತಾ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸೇವೆಗಳಿಗೆ ಸಂಬಂಧಿಸಿದಂತೆ ಆದ ನ್ಯೂನ್ಯತೆಗಳ ಬಗ್ಗೆ ಕಾರ್ಯದರ್ಶಿಯವರೊಡನೆ ಚರ್ಚಿಸಿದರು. ನುರಿತ ಸಿಬ್ಬಂದಿಗಳನ್ನು ದತ್ತಾಂಶ ನಮೂಕದರನ್ನಾಗಿ ನೇಮಿಸುವುದರಿಂದ ಬೆರಳಚ್ಚು ತಪ್ಪುಗಳನ್ನು ತಡೆಗಟ್ಟಬಹುದೆಂದು ತಿಳಿಸಿದರು. ಹಾಗೇಯೇ ತಪ್ಪು ಮಾಡಿದ ಸಿಬ್ಬಂದಿಗಳ ವಿರುದ್ದ ಕಟ್ಟುನಿಟ್ಟಿನ ಶಿಸ್ತು ಕ್ರಮವನ್ನು ಜರುಗಿಸಬೇಕೆಂದು ಸಹ ತಿಳಿಸಿದರು.
- ❖ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಸೇವೆಗಳ ಪಟ್ಟಿಯು ಎಲ್ಲಿಯೂ ಲಭ್ಯವಿಲ್ಲವೆಂದು ಹಾಗೂ ಯೋಜನೆಗಳ ಬಗ್ಗೆ ನಾಗರೀಕರಿಗೆ/ಶಾಸಕರುಗಳಿಗೆ ಅರಿವಾಗುವ ನಿಟ್ಟಿನಲ್ಲಿ ಸದರಿ ಎಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಸೇವೆಗಳ ಪಟ್ಟಿಯನ್ನು ನೀಡಬೇಕೆಂದು ಮಾನ್ಯ ಶಾಸಕರು ಕೋರಿದರು.
- ❖ ಸರ್ಕಾರದ ಕಾರ್ಯದರ್ಶಿಗಳು, ಸಿಆಸುಇ (ಆಸು) ರವರು ಮಾತನಾಡುತ್ತಾ, ಕ್ಷೇತ್ರವಾರು ಪ್ರಗತಿಯ ಮೇರೆಗೆ ಶ್ರೇಯಾಂಕವನ್ನು ನಿರ್ಧರಿಸಲಾಗುವುದು ಎಂಬುದನ್ನು ಮಾನ್ಯ ಕಾನೂನು ಮಂತ್ರಿಗಳ ಜೊತೆ ಚರ್ಚಿಸಿರುವುದಾಗಿ ತಿಳಿಸಿದರು. ಇದರಿಂದಾಗಿ, ಪ್ರತಿಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಬಹುದು.
- ❖ ಇದೇ ಸಂದರ್ಭದಲ್ಲಿ ನಿರ್ದೇಶಕರು, ಸಕಾಲ ಮಂಡಳಿ ಇವರು ನೆರೆದ ಶಾಸಕರುಗಳಿಗೆ ಹೇಗೆ ಸಕಾಲವು ನಾಗರೀಕರಿಗೆ ಸರ್ಕಾರಿ ಸೇವೆಯನ್ನು ಮುಟ್ಟಿಸಲು ಹೇಗೆ ಸಹಾಯಕವಾಗಬಹುದು ಎಂಬುದನ್ನು ಸವಿಸ್ತಾರವಾಗಿ ವಿವರಿಸಿದರು.
- ❖ ಒಳಾಡಳಿತ ಇಲಾಖೆಯ ಸೇವೆಗಳನ್ನು ಇಲಾಖೆಯು ಸರಿಯಾಗಿ ನೀಡುತ್ತಿಲ್ಲ ಉದಾಹರಣೆಗೆ ದೂರುಗಳ ದಾಖಲಾತಿ ಶಿಫಾರಸ್ಸು ಇಲ್ಲದೇ ಕೊಟ್ಟ ದೂರುಗಳನ್ನು ಪೋಲೀಸ್ ಇಲಾಖೆಯು ದಾಖಲಿಸುತ್ತಿವೆಂದು ನೇರವಾಗಿ ಶಾಸಕರುಗಳೇ ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ಸಂಬಂಧಪಟ್ಟವರು ಕ್ರಮ ಜರುಗಿಸಬೇಕು ಎಂದು ತಿಳಿಸಿದರು. ಆಗ ಮಂಡಳಿಯ ನಿರ್ದೇಶಕರು ದೂರುಗಳನ್ನು ದಾಖಲಿಸುವ ತಂತ್ರಾಂಶವನ್ನು ಪೋಲೀಸ್ ಇಲಾಖೆಯು ರಚಿಸುತ್ತಿದೆ. ಮುಂದಿನ 2 ತಿಂಗಳುಗಳಲ್ಲಿ ಸಾರ್ವಜನಿಕರೇ ದೂರುಗಳನ್ನು ದಾಖಲಿಸಬಹುದು ಎಂಬುದನ್ನು ತಿಳಿಸಿದರು.

**3)** <u>29ನೇಅಕ್ಟೋಬರ್ 2013 ಮಹಿಳೆಯರೊಂದಿಗೆ ಜಾಗೃತಿ ಕಾರ್ಯಕ್ರಮ</u>: ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಸಕಾಲದ ಕುರಿತ ಜಾಗೃತಿ ಕಾರ್ಯಕ್ರಮವನ್ನು ಜರಗಿಸಲಾಯಿತು. ಕರಪತ್ರಗಳು, ಬ್ರೋಚರ್ ಗಳು, ಇತರ ಪ್ರಚಾರ ಸಾಮಗ್ರಿಯನ್ನು ಮಹಿಳಾ ಕೇಂದ್ರಗಳಲ್ಲಿ ವಿತರಿಸಲಾಯಿತು. ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕ ಬಿ ನಾಗ ಸುಂದರ ಇವರು ಮಹಿಳಾ ಗುಂಪುಗಳಿಗೆ ಹೆಚ್ಚಿನ ಮಾಹಿತಿಯನ್ನು ನೀಡಿದರು.




ಭೇ

**ದಿನಾಂಕ:** 29:10:2013 **ರಂದು ಮಧ್ಯಾನ್ಯ 3:30 ಗುಂಡ್ಲುಪೇಟೆ** ವಾರ್ಡ್ ನಂ7 ರಲ್ಲಿ "ಪಾರ್ವತಮ್ಮ ಸ್ರೀ ಶಕ್ತಿ ಸ್ವ–ಸಹಾಯ ಮತ್ತು ವರಮಹಾಲಕ್ಷ್ಮಿ ಸ್ವ–ಸಹಾಯ ಸಂಘಕ್ಕೆ ಸಕಾಲದ ಸಹಾಯವಾಣಿ ಕೇಂದ್ರದ ಬಗ್ಗೆ ಎಲ್ಲಾ ಆಸಕ್ತ ಮಹಿಳೆಯರಿಗೆ ಸಮಯ ಬದ್ಧವಾಗಿ ನಾಗರಿಕರಿಗೆ ಒದಗಿಸಲಾದ ಸೇವೆಗಳು ಮತ್ತು ಇಲಾಖೆಗಳ ಬಗ್ಗೆ ಅರಿವು ಮೂಡಿಸಲು ಸಹಾಯಕವಾಯಿತು.



## 4) ಅಹ್ಮದಾಬಾದ್: ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ನಲ್ಲಿ ಸೆಮಿನಾರ್:

5ನೇ ಅಕ್ಟೋಬರ್ 2013 ಡಾ॥ ಶಾಲಿನಿ ರಜನೀಶ್, ಮಿಷನ್ ನಿರ್ದೇಶಕರು, ಸಕಾಲ ಮಿಷನ್ ಇವರನ್ನು ನಿಗದಿತ ಅವಧಿಯಲ್ಲಿ 30 ಮಿಲಿಯನ್ ಕುಂದುಕೊರತೆಗಳ ಪರಿಹಾರ ' ಸಕಾಲ' ಕರ್ನಾಟಕದಲ್ಲೊಂದು ನೂತನ ಪ್ರಯೋಗ' ಎಂಬ ವಿಷಯದಲ್ಲಿ ಅತಿಥಿ ಭಾಷಣಗಾರರಾಗಿ ಆಹ್ವಾನಿಸಲಾಯಿತು. ಜೊತೆಗೆ ಅಪರ ಮಿಷನ್ ನರ್ದೇಶಕರಾದ ಶ್ರೀ ಮನೋಜ್ ಇದ್ದರು. ಹೆಚ್ಚುತ್ತಿರುವ ಸಾಮಾಜಿಕ ಬೇಡಿಕೆಗಳ ಹಿನ್ನೆಲೆಯಲ್ಲಿ ಸಾರ್ವಜನಿಕ ಸಂಸ್ಥೆಗಳ ಹೆಚ್ಚುತ್ತಿರುವ ಉತ್ತರದಾಯಿತ್ವದ ಕುರಿತಂತೆ ಐಐಎಂ ನ ವಿದ್ಯಾರ್ಥಿ ಹಾಗೂ ಶಿಕ್ಷಕ ವೃಂದವನ್ನು ಉದ್ದೇಶಿಸಿ ಮಾತಾನಾಡಿದರು. ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ರಡಿ 419 ಸೇವೆಗಳನ್ನು ನೀಡುತ್ತಿರುವ ಗತಿ ಹಾಗೂ ಗುಣಮಟ್ಟವು ನಿರಂತರ ಅಭಿವೃದ್ದಿಗೊಳ್ಳುತ್ತಿದೆ. ಸರ್ಕಾರದ ಉಪಕ್ರಮವು ಯಶಸ್ವಿಯಾಗಬೇಕಾದರೆ ಸಾರ್ವಜನಿಕ ಬೆಂಬಲ ಅತ್ಯಾವಶ್ಯಕ ಎಂಬ ವಿಚಾರಕ್ಕೆ ಮಿಷನ್ ನಿರ್ದೇಶಕರು ಒತ್ತು ನೀಡಿದರು. ಜೀವನವನ್ನೇ ನೇರವಾಗಿ ಸ್ಪಂದಿಸುವುದರಿಂದ ಸೂಕ್ತ ಕಾರ್ಯಕ್ರಮ ಅಳವಡಿಕೆಯ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸಿದರು. ಸಾಮಾನ್ಯ ನಾಗರಿಕರಿಗೆ ಇದರ ಬಗ್ಗೆ ಹೆಚ್ಚು ತಿಳುವಳಿಕೆ ನೀಡುವ ಹಾಗೂ ಆ ಮೂಲಕ ಸರ್ಕಾರದ ಆಶಯಗಳನ್ನು ಸಾಧಿಸಿಕೊಳ್ಳುವ ಉದ್ದೇಶವನ್ನು ಸಾದರಪಡಿಸಿದರು.



ಡಾ॥ ಶಾಲಿನಿ ರಜನೀಶ್, ಮಿಷನ್ ನಿರ್ದೇಶಕರು, ಸಕಾಲ ಮಿಷನ್ ಹಾಗೂ ಅಪರ ಮಿಷನ್ ನರ್ದೇಶಕರಾದ ಶ್ರೀ ಮನೋಜ್ ಅವರಯ ಐಐಎಂ – ಅಹಮದಾಬಾದ್ ವಿದ್ಯಾರ್ಥಿಗಳೊಂದಿಗೆ ಚರ್ಚೆ

**5) ಸಕಾಲ ಕಾರ್ಯಗಾರ – ರಾಯಚೂರು:** ಅಕ್ಟೋಬರ್ 1ರಂದು ರಾಯಚೂರು ಜಿಲ್ಲೆ ಲಿಂಗಸುಗುರಿನಲ್ಲಿ ಹಾಗೂ 3ನೇ ದಿನಾಂಕದಂದು ರಾಯಚೂರು ವಿಭಾಗಿಯ ಕಂದಾಯ ಕಛೇರಿ–ರಾಯಚೂರಿನಲ್ಲಿ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರಾದಂತಹ ಕುಮಾರಿ ಆಯಿಷ ಸಕಾಲದ ಬಗ್ಗೆ ಹಮ್ಮಿಕೊಂಡಂತಹ ಕಾರ್ಯಗಾರದ ದೃಶ್ಯ. ಕಂದಾಯ ಇಲಾಖೆಯ ಅಧಿಕಾರಿಗಳು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.






**6) ಆರ್ ಟಿ ಐ:** ಬಗ್ಗೆ ಆಯೋಜಿಸಿದ್ದ ಕಾರ್ಯಗಾರದಲ್ಲಿ ಸಕಾಲ ನಿರ್ದೇಶಕರು ಮಾತನಾಡುತ್ತಿರುವುದು.

ಮಾಹಿತಿ ಹಕ್ಕು ಅಧಿನಿಯಮ ಕಾರ್ಯಗಾರ 8ನೇ ಅಕ್ಟೋಬರ್ 2013: ಕರ್ನಾಟಕ ಸರ್ಕಾರದ ಸಚಿವಾಲಯ ತರಬೇತಿ ಕೇಂದ್ರ ಬೆಂಗಳೂರು ಇಲ್ಲಿ ನಡೆಸಲಾದ ಮಾಹಿತಿ ಹಕ್ಕು ಅಧಿನಿಯಮ ಕುರಿತ ಕಾರ್ಯಗಾರವೊಂದರಲ್ಲಿ ಡಾ॥ ಶಾಲಿನಿ ರಜನೀಶ್, ಸರ್ಕಾರದ ಕಾರ್ಯದರ್ಶಿ, ಸಿ ಆ ಸು ಇ (ಆಸು) ರವರು ಹಿರಿಯ ಅಧಿಕಾರಿಗಳನ್ನುದ್ದೇಶಿಸಿ ಮಾತಾನಾಡಿದರು. ಸಕಾಲ ಹಾಗೂ ಮಾಹಿತಿ ಹಕ್ಕು ಅಧಿನಿಯಮ ಇವೆರಡೂ ಪರಸ್ಪರ ಪೂರಕವಾಗಿದ್ದು, ನಾಗರಿಕರಿಗೆ ಸಹಾಯ ಹಸ್ತ ನೀಡುತ್ತವೆ. ಎರಡೂ ಕಾಯಿದೆಗಳು ಸರ್ಕಾರದಲ್ಲಿ ಪಾರದರ್ಶಕತೆಯನ್ನು ಉಂಟು ಮಾಡುತ್ತವೆ, ಮಾಹಿತಿ ಹಕ್ಕು ಅಧಿನಿಯಮವನ್ನು ಸಕಾಲದಡಿ ಸೇರಿಸಕೊಳ್ಳುವಂತೆ ಒತ್ತಡವಿದೆ. ಆದಾಗ್ಯೂ ಕೇಂದ್ರ ಸರ್ಕಾದಿಂದ ಉದ್ದೇಶಿತ ಸೇವೆಗಳ ವಿಲೇವಾರಿ ಮಸೂದೆಯು ಅನುಮೋದನೆಗಾಗಿ ಬಾಕಿಯಿದೆ. ನಾಗರಿಕರ ಪ್ರತಿಕ್ರಿಯೆಯು ಸಕಾಲದಡಿ ನಿರ್ಣಯಕವೆನಿಸಿದೆ. ಆಡಳಿತವನ್ನು ನಾಗರಿಕ ಸ್ನೇಹಿಯಾಗಿ ಪರಿವರ್ತಿಸುತ್ತಿರುವುದರ ಜೊತೆಗೆ ನಾಗರಿಕರಿಗೆ ಹೆಚ್ಚಿನ ಅಧಿಕಾರವನ್ನು ಅದು ಒದಗಿಸುತ್ತದೆ.




ಆರ್.ಟಿ.ಐ. ಬಗ್ಗೆ ನಡೆದ ಕಾರ್ಯಾಗಾರದಲ್ಲಿ ಉದ್ಘಾಟನಾ ಭಾಷಣ ಮಾಡುತ್ತಿರುವ ಡಾ: ಶಾಲಿನಿ ರಜನೀಶ್, ಐಎಎಸ್., ಸರ್ಕಾರದ ಕಾರ್ಯದರ್ಶಿ, ಸಿಆಸುಇ(ಆಸು)

ಸಕಾಲ ನಿರ್ದೇಶಕರು ಪಾರದರ್ಶಕತೆಯಿಂದ ಆಗುವ ಉಪಯುಕ್ತತೆ ಬಗ್ಗೆ ಸಭೆಗೆ ತಿಳಿಸುತ್ತಿರುವುದು,ಹಾಗೆಯೇ ನಾಗರಿಕ ಸನ್ನದ್ದಿನ ಸಿಟಿಜನ್ ಚಾರ್ಟರ್ ಬಗ್ಗೆ ಕೂಡ ವಿವರಿಸಿದರು, ಸಕಾಲದ ಬಗ್ಗೆ ತಿಳಿಸುತ್ತಾ ನಾಗರಿಕರ ಮರುಸ್ಪಂದನೆಯಿಂದಾಗಿ ನಾಗರಿಕ ಸ್ನೇಹಿ ಆಡಳಿತವನ್ನು ಸಾಧಿಸಬಹುದು ಎಂದು ಸಭೆಗೆ ವಿವರಿಸಿದರು.

7) **ಮೈಸೂರಲ್ಲಿ ನಡೆದ ದಸರಾ ಹಬ್ಬದಲ್ಲಿ 'ಸಕಾಲ' ಬಗ್ಗೆ ಜಾಗೃತಿ**ಗಾಗಿ ಒಂದು ಕೌಂಟರ್ ಅನ್ನು ತೆರೆಯಲಾಗಿತ್ತು, ಇದರಲ್ಲಿ ಜಿಲ್ಲೆಯ ಮಾಹಿತಿ ತಂತ್ರಜ್ಞಾನ ಸಮಾಲೋಚಕರು ಸಕಾಲದ ಬಗ್ಗೆ ಮಾಹಿತಿ ನೀಡಲು ನೆರವಾದರು.




**<u>8) ಬಾಂಗ್ಲಾ ದೇಶದ ಸಿವಿಲ್ ಸೇವೆಗಳ ಅಧಿಕಾರಿಗಳಿಗೆ ವಿಡಿಯೋ ಕಾನ್ಫರೆನ್ಸ್</u> ಮುಖಾಂತರ** ಸಕಾಲ ಮಂಡಳಿ ನಿರ್ದೇಶಕರು ವಿವರಣೆ ನೀಡುತ್ತಿರುವುದು.



**ಡಾ: ಶಾಲಿನಿ ರಜನೀಶ್ ರವರು ವಿಡಿಯೋ ಕಾನ್ಫರೆನ್ಸ್ ಮೂಲಕ ಬಾಂಗ್ಲಾ ದೇಶದ ಅಧಿಕಾರಿಗಳಿಗೆ ಸಕಾಲದ ಬಗ್ಗೆ ಮಾಹಿತಿ ನೀಡುತ್ತಿರುವ ದೃಶ್ಯ.**

**9) <u>ಜಾಗೃತಿ ಪಾಕ್ಷಿಕ ಅಂಗವಾಗಿ ಅಕೌಂಟೆಂಟ್ ಜನರಲ್ ಕಛೇರಿ</u>ಯಲ್ಲಿ ಆಯೋಜಿಸಿದ್ದ ಕಾರ್ಯ ಕ್ರಮದಲ್ಲಿ ಸಕಾಲ ಮಂಡಳಿಯ ನಿರ್ದೇಶಕರು ಸಕಾಲದ ಬಗ್ಗೆ ವಿವರಿಸಿದರು ಹಾಗೆಯೇ ಪಾರದರ್ಶಕತೆಯಿಂದ ಆಡಳಿತದಲ್ಲಿ ಆಗುವ ಪ್ರಯೋಜನಗಳನ್ನು ವಿವರಿಸಿದರು ಹಾಗೆಯೇ ಎನ್ ಎ ಎಲ್ ನಲ್ಲಿ ಕೂಡ ಇದೇ ಪಕ್ಷಿಕದ ಅಂಗವಾಗಿ ಸಕಾಲದ ಬಗ್ಗೆ ವಿವರಿಸಿದರು.**




**ಜಾಗೃತಿ ಪಾಕ್ಷಿಕ ಅಂಗವಾಗಿ ಅಕೌಂಟೆಂಟ್ ಜನರಲ್ ಕಛೇರಿಯಲ್ಲಿ ಸಕಾಲ ಮಂಡಳಿಯ ನಿರ್ದೇಶಕರು ಸಕಾಲದ ಬಗ್ಗೆ ವಿವರಣೆ ನೀಡುತ್ತಿರುವುದು**



>> ಮುಖ್ಯಮಂತ್ರಿಯಿಂದ ಜನಸಂಪರ್ಕ ಸಭೆ

## ಅರ್ಜಿಗಳ ವಿಲೇವಾರಿಗೆ 15 ದಿನಗಳ ಗಡುವು

ಮೈಸೂರು, ಅ.6: ದಸರಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ತವರು ಜಿಲ್ಲೆಯಲ್ಲಿ ಜನಸಂಪರ್ಕ ಸಭೆ ನಡೆಸಿ ನೂರಾರು ಮಂದಿಯ ಅಹವಾಲುಗಳನ್ನು ಸ್ವೀಕರಿಸಿದರು.

ಮೈಸೂರು-ಬೆಂಗಳೂರು ರಸ್ತೆಯ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡು ಮುಖ್ಯಮಂತ್ರಿಯ ಮುಂದೆ ದುಃಖ ದುಮ್ಮಾನವನ್ನು ಹಂಚಿಕೊಂಡರು.

ಅನೇಕರ ಸಮಸ್ಯೆ ಸ್ಥಳದಲ್ಲೇ ಇತ್ಯರ್ಥಗೊಂಡರೆ, ಹಲವರ ಅರ್ಜಿ ವಿಲೇವಾರಿಗೆ ಮುಖ್ಯಮಂತ್ರಿ 15 ದಿನಗಳ ಗಡುವು ವಿಧಿಸಿದ್ದಾರೆ.

ಇದೇ ಸಂದರ್ಭದಲ್ಲಿ ಮಾತನಾಡಿದ ಸಿಎಂ, ಎಲ್ಲ ಜಿಲ್ಲೆಗಳಲ್ಲೂ ಇನ್ನು ಮುಂದೆ ಜನತಾದರ್ಶನ ನಡೆಸುತ್ತೇನೆ. ಅದರ ಜತೆಯಲ್ಲೇ ಪ್ರಗತಿ ಪರಿಶೀಲನೆ ಸಭೆ ಕೂಡಾ ನಡೆಯಲಿದೆ. ಅಧಿಕಾರಿಗಳು ಜನತೆಯ ಸಮಸ್ಯೆಗೆ ಸ್ಪಂದಿಸಬೇಕು. ಕಂದಾಯ, ಜಿಲ್ಲಾಧಿಕಾರಿ ಕಚೇರಿ, ಜಿಪಂ ಕಚೇರಿಗಳಲ್ಲಿ ಕೆಲಸ ಮಂದಗತಿಯಲ್ಲಿ ಸಾಗುತ್ತಿದೆ. ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂಬ ದೂರುಗಳು ಹೆಚ್ಚಿನ ಪ್ರಮಾಣದಲ್ಲಿ ಬಂದಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎಲ್ಲ ಅಧಿಕಾರಿಗಳೂ ಸ್ಪಂದಿಸುತ್ತಾರೆ ಎಂದು ಹೇಳುವುದಿಲ್ಲ. ಹಾಗೆಯೇ ಜನಸ್ಪಂದನೆಯ ಅಧಿಕಾರಿಗಳು ಇಲ್ಲ ಎಂಬ ಅರ್ಥವೂ ಅಲ್ಲ. ಅಧಿಕಾರಿ ವಲಯಕ್ಕೆ ಚುರುಕು ಮುಟ್ಟಿಸಲು ಈ ರೀತಿ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಇಲ್ಲಿ ನೀಡಲಾಗುವ ಅರ್ಜಿಗಳನ್ನು ವಿಲೇವಾರಿ ಮಾಡಲು ಅಧಿಕಾರಿಗಳಿಗೆ 15 ದಿನದ ಕಾಲಾವಧಿ ನೀಡಲಾಗುವುದು. ಅಷ್ಟರಲ್ಲಿ ಅವರು ಅರ್ಜಿ ಇತ್ಯರ್ಥಗೊಳಿಸದಿದ್ದರೆ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

**ಕೇಳಿ ಬಂದ ದೂರು:** ಸ್ವಾಮಿ ನಾನು ಕಳೆದ 25 ವರ್ಷದಿಂದ ರಂಗಭೂಮಿಯಲ್ಲಿ ಜೀವ ಸವೆಸಿದ್ದೇನೆ. ಈ ಬಾರಿ ರಾಜ್ಯೋತ್ಸವದಂದು ನನಗೆ ಪ್ರಶಸ್ತಿ ಕೊಡಿಸಿ ಎಂದು ಈರ್ವರು ರಂಗ ಕಲಾವಿದರ ಜೊತೆ, ಸ್ವಾಮಿ, ಸುತ್ತೂರಿನಿಂದ ಬೀಳಿಕೆರೆಗೆ ವರ್ಗ ಮಾಡಿಸಿಕೊಡಿ, ನನಗೆ ನಡೆಯಲಾಗುವುದಿಲ್ಲ ಎಂದು ಡಿಡಿಪಿಐಗೆ ಹೇಳಿದರೂ ಕಿವಿ ಮೇಲೆ ಹಾಕ್ಕೋತಾ ಇಲ್ಲ. ಪ್ಲೀಸ್, ವರ್ಗಮಾಡಿಸಿ ಎಂದು ಕುಂಟುತ್ತಿದ್ದ ಅಂಗನವಾಡಿ ಶಿಕ್ಷಕಿಯೋರ್ವರ ಅಳಲು. ಸರ್.. ಪೋಲಿಯೋ ಪೀಡಿತೆಯಾದ ನಾನು ಪದವೀಧರೆ. ನನಗೆ ಯಾವುದಾದರೂ ಕೆಲಸ ಕೊಡಿಸಿ ಎಂದು ವಿಕಲಾಂಗ ಯುವತಿಯೋರ್ವಳ ಕೋರಿಕೆ

ಹೀಗೆ ದೂರು-ದುಮ್ಮಾನಗಳನ್ನು ಹೊತ್ತು, ಪರಿಹಾರ ಸಿಗಬಹುದೆಂಬ ಅದಮ್ಯ ಆಸೆಯ ಬೆನ್ನೇರಿ ಸಿಎಂ ದರ್ಶನಕ್ಕೆ ಬಂದವರು ಹಲವಾರು ಮಂದಿ. ಮೈಸೂರಿನ ಸರಕಾರಿ ಅತಿಥಿಗೃಹದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಲಾಗಿದ್ದ ಜನತಾದರ್ಶನದಲ್ಲಿ ದೂರುಗಳು, ಕೋರಿಕೆಗಳು, ಅಗ್ರಹಗಳ ಮಹಾಪೂರವೇ ಹರಿದುಬಂದಿತ್ತು.

ಬೆಂಗಳೂರು ಬೆಳಗಾವಿ ಶಿವಮೊಗ್ಗ ಮಂಗಳೂರು ಹುಬ್ಬಳ್ಳಿ ಗುಲ್ಬರ್ಗ ಬೆಂಗಳೂರು 16 ಅಕ್ಟೋಬರ್ 2013 ಬುಧವಾರ 20 ಪುಟ ₹ 3–50

ಕನ್ನಡಪ್ರಭ

# ರಾಜ್ಯದ ಸಕಾಲಕ್ಕೆ ಬೆರಗಾದ ಕೇಂದ್ರ

## ಉದ್ದೇಶಿತ ನಾಗರಿಕ ಸೇವೆಗಳ ಖಾತರಿ ಕಾಯ್ದೆಗೆ ರಾಜ್ಯದ ಯೋಜನೆ ಮಾದರಿ

■ ಪ್ರದೀಪ್ ಕುಮಾರ್ ಎಂ.
ಕನ್ನಡಪ್ರಭ ವಾರ್ತೆ | ಬೆಂಗಳೂರು | ಅ.15

> ಸಕಾಲ ಮುಖ್ಯಮಂತ್ರಿಗಳ ಮಹತ್ವದ ಬದ್ಧತೆ. ಸರ್ಕಾರಿ ನೌಕರರ ಸಂಘವೂ ಇದನ್ನು ಪೂರಕವಾಗಿ ಪರಿಗಣಿಸಿ ಸಹಕರಿಸುತ್ತಿದ್ದಾರೆ. ಹಿಂದಿನ ಮತ್ತು ಈಗಿನ ಸರ್ಕಾರದ ಕಾನೂನು ಸಚಿವರು ಇದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದರು. ಜತೆಗೆ ಎಲ್ಲಾ ಇಲಾಖೆಗಳನ್ನು ಒಂದೇ ವೇದಿಕೆಯಡಿ ತರುವ ಇ–ಆಡಳಿತದಿಂದಾಗಿ ಸಕಾಲ ರಾಜ್ಯದಲ್ಲಿ ಯಶಸ್ವಿಯಾಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರದ ಪ್ರಶಂಸಾ ಪತ್ರವೂ ಬಂದಿದೆ.
>
> ■ ಶಾಲಿನಿ ರಜನೀಶ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರಧಾನ ಕಾರ್ಯದರ್ಶಿ

ನಿಗದಿತ ಅವಧಿಯೊಳಗೆ ಸರ್ಕಾರಿ ಸೇವೆ ಒದಗಿಸುವ ರಾಜ್ಯ ಸರ್ಕಾರದ ಸಕಾಲ ಯಶಸ್ಸಿಗೆ ಮತ್ತೊಂದು ಗರಿ.

ಯೋಜನೆ ಅನುಷ್ಠಾನ ಕುರಿತಂತೆ ಪ್ರಶಂಸಾ ಪತ್ರ ನೀಡಿರುವ ಕೇಂದ್ರ ಸರ್ಕಾರ ತಾನು ಜಾರಿಗೆ ತರಲು ಉದ್ದೇಶಿಸಿರುವ ನಾಗರಿಕ ಸೇವೆಗಳ ಖಾತರಿ ಕಾಯ್ದೆಗೆ ಸಕಾಲ ಅನುಷ್ಠಾನದ ಬಹುತೇಕ ಅಂಶಗಳನ್ನು ಪರಿಗಣಿಸಲು ಮುಂದಾಗಿದೆ.

ನಾಗರಿಕ ಸೇವೆಗಳ ಖಾತರಿ ಕಾಯ್ದೆ ರೂಪಿಸಲು ಮುಂದಾಗಿರುವ ಕೇಂದ್ರ **ಸರ್ಕಾರ, ಈ ನಿಟ್ಟಿನಲ್ಲಿ ಈಗಾಗಲೇ ಸಕಾಲ ಸೇರಿದಂತೆ ಇತರೆ ರಾಜ್ಯಗಳಲ್ಲಿ** ಜಾರಿಯಲ್ಲಿರುವ ನಾಗರಿಕ ಸೇವೆಗಳ ಖಾತರಿ ಕಾಯ್ದೆಗಳನ್ನು ಕೂಡ ಪರಿಶೀಲಿಸುತ್ತಿದೆ. ಆದರೆ, ಈ ಪೈಕಿ ಮೊದಲ ಆದ್ಯತೆ ರಾಜ್ಯದ ಸಕಾಲಕ್ಕೆ. ಇದಕ್ಕೆ ಕಾರಣ ಯೋಜನೆಯ ಪರಿಣಾಮಕಾರಿ **ಜಾರಿಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳು.**

ದೇಶದ 14 ರಾಜ್ಯಗಳಲ್ಲಿ ನಾಗರಿಕ ಸೇವೆಗಳ ಖಾತರಿ ಕಾಯ್ದೆ ಜಾರಿಯಲ್ಲಿದೆಯಾದರೂ ಅದರ ಅಡಿಯಲ್ಲಿ ಅತಿ ಹೆಚ್ಚು ಸೇವೆಗಳನ್ನು ನೀಡುತ್ತಿರುವುದು ಮತ್ತು ಈ ಯೋಜನೆಯನ್ನು ಪಾರದ**ರ್ಶಕವಾಗಿ ಜಾರಿಗೆ ತಂದಿರುವುದು ರಾಜ್ಯ ಮಾತ್ರ. ಇತರೆ 13 ರಾಜ್ಯಗಳಿ**ಗಿಂತ ತಡವಾಗಿ ಕರ್ನಾಟಕ ಈ ಯೋಜನೆ ಜಾರಿಗೆ ತಂದಿದ್ದರೂ ಹೆಚ್ಚು ಪರಿಣಾಮಕಾರಿಯಾಗಿ ಜಾರಿಮಾಡಿದೆ. ಈ ಕಾರಣದಿಂದಲೇ ಕೇಂದ್ರ ಸರ್ಕಾರ ಸಕಾಲ ಯೋಜನೆಯನ್ನು ತನ್ನ **ಕಾಯ್ದೆಗೆ ಹೆಚ್ಚಿನ ಪ್ರಮಾಣದಲ್ಲಿ ಪರಿಗಣಿಸುತ್ತಿದೆ.**

└► 15

# ಹಳ್ಳಿ ಪ್ರವಾಸಕ್ಕೆ ಆದ್ಯತೆ: ಕೌಶಿಕ್ ಮುಖರ್ಜಿ


ಕೌಶಿಕ್ ಮುಖರ್ಜಿ

ಪ್ರಜಾವಾಣಿ ಸಂದರ್ಶನ

ಬೆಂಗಳೂರು ಬೆಳಗಾವಿ ಶಿವಮೊಗ್ಗ ಮಂಗಳೂರು ಹುಬ್ಬಳ್ಳಿ ಗುಲ್ಬರ್ಗ ಬೆಂಗಳೂರು 16 ಅಕ್ಟೋಬರ್ 2013 ಬುಧವಾರ 20 ಪುಟ ₹ 3–50

ಕನ್ನಡಪ್ರಭ

# ರಾಜ್ಯದ 'ಸಕಾಲ'ಕ್ಕೆ ಬೆರಗಾದ ಕೇಂದ್ರ

ಮೊದಲ ಪುಟದಿಂದ ←

ಕೇರಳ ಹೊರತುಪಡಿಸಿ ಇತರೆ ರಾಜ್ಯಗಳು ಕರ್ನಾಟಕಕ್ಕಿಂತ ಮೊದಲೇ ನಾಗರಿಕ ಸೇವೆಗಳ ಖಾತರಿ ಕಾಯ್ದೆ ಜಾರಿಗೆ ತಂದಿದ್ದರೂ ಅತಿ ಹೆಚ್ಚು ಸೇವೆಗಳನ್ನು ಒದಗಿಸುತ್ತಿರುವುದು ರಾಜ್ಯ ಸರ್ಕಾರ. 20 ಇಲಾಖೆಗಳ 375 ಸೇವೆಗಳನ್ನು ಸಕಾಲ ಯೋಜನೆಯಲ್ಲಿ ನೀಡಲಾಗುತ್ತಿದ್ದು, ಇನ್ನೂ 200 ಸೇವೆಗಳನ್ನು ಈ ವ್ಯಾಪ್ತಿಗೆ ತರಲು ನಿರ್ಧರಿಸಲಾಗಿದೆ. ಇತರೆ ರಾಜ್ಯಗಳಲ್ಲಿ ಛತ್ತೀಸ್‌ಗಢದಲ್ಲಿ 251 ಸೇವೆಗಳಿದ್ದರೆ, ರಾಜಸ್ಥಾನದಲ್ಲಿ 108 ಸೇವೆಗಳನ್ನು ಈ ಕಾಯ್ದೆ ವ್ಯಾಪ್ತಿಗೆ ತರಲಾಗಿದೆ. ಉಳಿದ ರಾಜ್ಯಗಳಲ್ಲಿ ಸೇವೆಗಳ ಸಂಖ್ಯೆ 100ಕ್ಕಿಂತ ಕಡಿಮೆ ಇದೆ.

**ಯಾತಕ್ಕಾಗಿ ಸಕಾಲ ಪರಿಗಣನೆ?:** ಕೇಂದ್ರ ಸರ್ಕಾರ ಸಕಾಲ ಯೋಜನೆಯನ್ನು ಹೆಚ್ಚಾಗಿ ಅವಲಂಬಿಸಲು ಇದೊಂದೇ ಕಾರಣವಲ್ಲ. ಬದಲಾಗಿ ಅದರ ಜಾರಿಗೆ ಸರ್ಕಾರ ಕೈಗೊಂಡಿರುವ ಕ್ರಮ. ಈ ಕ್ರಮದಿಂದಾಗಿ ಅರ್ಜಿಗಳು ಇತ್ಯರ್ಥವಾಗುವ ಪ್ರಮಾಣ. 2011ರ ಮಾರ್ಚ್‌ನಲ್ಲಿ ಸಕಾಲ ಯೋಜನೆ ಜಾರಿಯಾಗಿದ್ದು, ಇದುವರೆಗೆ ಸಕಾಲದಲ್ಲಿ 3.57 ಕೋಟಿ ಅರ್ಜಿಗಳು ಸ್ವೀಕೃತವಾಗಿವೆ. ಈ ಪೈಕಿ 3.48 ಕೋಟಿಗೂ ಹೆಚ್ಚು ಅರ್ಜಿಗಳು ಇತ್ಯರ್ಥವಾಗಿವೆ. ಯೋಜನೆಯ ಒಟ್ಟಾರೆ ಪ್ರಗತಿ ಶೇ. 98ಕ್ಕಿಂತಲೂ ಹೆಚ್ಚಾಗಿದೆ.

ಇದಕ್ಕೆ ಕಾರಣ ಸಕಾಲ ಯೋಜನೆಯ ಗಣಕೀಕರಣ. ಇದರಿಂದ ಯೋಜನೆ ಜಾರಿಯಲ್ಲಿ ಪಾರದರ್ಶಕತೆ ಕಾಣಿಸಿಕೊಂಡಿದೆ. ಯಾರು ಬೇಕಾದರೂ ತಮ್ಮ ಅರ್ಜಿಯ ಸ್ಥಿತಿಗತಿಗಳನ್ನು ವೆಬ್‌ಸೈಟ್ ಮೂಲಕ ತಿಳಿದುಕೊಳ್ಳಬಹುದು. ಅಷ್ಟೇ ಅಲ್ಲ, ಅರ್ಜಿಗಳ ಸ್ಥಿತಿಗತಿ ಬಗ್ಗೆ ನಾಗರಿಕರಿಗೆ ಎಸ್‌ಎಂಎಸ್ ಕಳುಹಿಸುವ ಸೌಲಭ್ಯವೂ ಇದೆ. ಜತೆಗೆ ವೆಬ್‌ಸೈಟ್ ಮೂಲಕ ಯೋಜನೆ ಅನುಷ್ಠಾನದ ಪ್ರಮಾಣವನ್ನು ತಿಳಿದುಕೊಳ್ಳುವ ವ್ಯವಸ್ಥೆ ಇದೆ. ನಾಗರಿಕರಿಗೆ ಕಂಪ್ಯೂಟರ್ ಜ್ಞಾನ ಇಲ್ಲದೇ ಇದ್ದರೆ ಕಾಲ್‌ಸೆಂಟರ್‌ಗೆ ಕರೆ ಮಾಡಿಯೂ ತಮ್ಮ ಅರ್ಜಿಯ ಬಗ್ಗೆ ತಿಳಿದುಕೊಳ್ಳಬಹುದು.

ಜತೆಗೆ ಸಕಾಲ ಜಾರಿಯಾಗುವ ಮುನ್ನ ಮತ್ತು ನಂತರದಲ್ಲಿ ಅದರಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಗೆ ಸರ್ಕಾರ ನೀಡಿದ ಅವಕಾಶ, ಜಾಹೀರಾತುಗಳು ಕೂಡ ಸಕಾಲ ಯಶಸ್ಸಿಗೆ ಕಾರಣವಾಗಿದೆ.

ಇದಲ್ಲದೆ, ಸಕಾಲ ಕುರಿತಂತೆ ಜಾಗೃತಿ ಮೂಡಿಸಲು ಫೇಸ್‌ಬುಕ್, ಟ್ವಿಟರ್ ಮತ್ತಿತರ ಸಾಮಾಜಿಕ ತಾಣಗಳ ನೆರವನ್ನೂ ಪಡೆದುಕೊಳ್ಳಲಾಗುತ್ತಿದೆ. ಸರ್ಕಾರದ ಯೋಜನೆಯೊಂದರ ಬಗ್ಗೆ ಈ ರೀತಿ ಸಾಮಾಜಿಕ ತಾಣಗಳನ್ನು ಬಳಸಿಕೊಂಡಿದ್ದು ಇದೇ ಪ್ರಥಮ. ಸಕಾಲ ಯೋಜನೆ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರ ಮಾಡಿರುವ ಆಂದೋಲನ ವಿಶ್ವಬ್ಯಾಂಕ್ ಪ್ರಶಂಸೆಗೂ ಪಾತ್ರವಾಗಿದೆ.

ಈಗಾಗಲೇ ಸಕಾಲ ಯೋಜನೆ ಕುರಿತಂತೆ ರಾಜ್ಯಕ್ಕೆ ಪ್ರಶಂಸಾ ಪತ್ರ ನೀಡಿರುವ ಕೇಂದ್ರ ಸರ್ಕಾರ ತನ್ನ ಉದ್ದೇಶಿತ ನಾಗರಿಕ ಸೇವೆಗಳ ಖಾತರಿ ಕಾಯ್ದೆ ರೂಪಿಸಲು ಸಕಾಲದ ಬಹುತೇಕ ಅನುಷ್ಠಾನ ಕ್ರಮಗಳನ್ನು ಬಳಸಿಕೊಳ್ಳಲು ತೀರ್ಮಾನಿಸಿದೆ.

**ಈಗಾಗಲೇ ಹಲವು ಸುತ್ತಿನ ಚರ್ಚೆ:** ರಾಜ್ಯದಲ್ಲಿ ಸಕಾಲ ಯೋಜನೆಯ ಪರಿಣಾಮಕಾರಿ ಅನುಷ್ಠಾನ ಕುರಿತಂತೆ ಕೇಂದ್ರ ಸರ್ಕಾರದ ಅಧಿಕಾರಿಗಳು ಹಲವು ಬಾರಿ ರಾಜ್ಯಕ್ಕೆ ಭೇಟಿ ನೀಡಿ ಮಾಹಿತಿ ಪಡೆದಿದ್ದಾರೆ. ಅಷ್ಟೇ ಅಲ್ಲ, ರಾಜ್ಯದಿಂದ ಸಂಬಂಧಿಸಿದ ಅಧಿಕಾರಿಗಳನ್ನು ಕರೆಸಿಕೊಂಡು ಚರ್ಚೆ ನಡೆಸಿದ್ದಲ್ಲದೆ, ಪವರ್‌ಪಾಯಿಂಟ್ ಪ್ರೆಸೆಂಟೇಷನ್ ಮೂಲಕವೂ ಹೆಚ್ಚಿನ ವಿಚಾರ ತಿಳಿದುಕೊಂಡಿದ್ದಾರೆ. ಬಹುತೇಕ ಮುಂದಿನ ವರ್ಷದಿಂದ ಕೇಂದ್ರ ಸರ್ಕಾರ ನಾಗರಿಕ ಸೇವೆಗಳ ಖಾತರಿ ಕಾಯ್ದೆ ಜಾರಿಗೆ ತರಲಿದೆ.

ಬೆಂಗಳೂರು । ಗುರುವಾರ 31

## ಸಕಾಲಕ್ಕೆ 200 ಸೇವೆಗಳ ಸೇರ್ಪಡೆ

ಮೈಸೂರು: ಸಕಾಲ ಯೋಜನೆಗೆ ಹೆಚ್ಚುವರಿಯಾಗಿ ಇನ್ನೂ 200 ಸೇವೆಗಳನ್ನು ಸೇರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ(ಡಿಪಿಎಆರ್) ಪ್ರಧಾನ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಹೇಳಿದರು. ಮೈಸೂರಿನ ಜೆಎಸ್‌ಎಸ್ ಕಾನೂನು



ಕಾಲೇಜಿನಲ್ಲಿ ಬುಧವಾರ ನಡೆದ ಸಕಾಲ ಯೋಜನೆ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ, ಸರ್ಕಾರದ ವಿವಿಧ ಇಲಾಖೆಗಳು 6 ಕೋಟಿ ಜನರಿಗೆ 1800ಕ್ಕೂ ಹೆಚ್ಚಿನ ಸೇವೆಗಳನ್ನು ಒದಗಿಸುತ್ತಿವೆ. ಹಂತ ಹಂತವಾಗಿ ಸಕಾಲ ಯೋಜನೆಗೆ ಸೇವೆಗಳನ್ನು ಸೇರಿಸಲಾಗುವುದು ಎಂದರು. ಪ್ರಸ್ತುತ ಸರ್ಕಾರದ 42 ಇಲಾಖೆಗಳು, ಸಂಸ್ಥೆಗಳ 419 ಸೇವೆಗಳನ್ನು ಸಕಾಲ ಯೋಜನೆಯಡಿ ನೀಡಲಾಗುತ್ತಿದೆ. ಈವರೆಗೂ 3.50 ಕೋಟಿ ಅರ್ಜಿಗಳು ಸಕಾಲದಲ್ಲಿ ಸ್ವೀಕೃತವಾಗಿವೆ. ನಿಗದಿತ ಅವಧಿಯೊಳಗೆ ಸೇವೆ ಒದಗಿಸದಿದ್ದರೆ ಅಂಥ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಯಿಂದ ಪರಿಹಾರ ಕೇಳಬಹುದು. ಸಕಾಲ ಸಹಾಯವಾಣಿ–080–4455 4455 ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಕರೆ ಮಾಡಿದರೆ 200 ದೂರವಾಣಿಗಳು ಸಂಪರ್ಕ ಸಿಗುತ್ತದೆ. ಸಂಬಂಧಪಟ್ಟ ಸೇವೆಗಳ ಬಗ್ಗೆ ಪ್ರಾಥಮಿಕ ಮಾಹಿತಿ ನೀಡುತ್ತಾರೆ. ಮಾಹಿತಿ ಇಲ್ಲದಿದ್ದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಮಾಹಿತಿ ಸಂಗ್ರಹಿಸಿ ವಾಪಸ್ ಕರೆ ಮಾಡಿ ಹೇಳುವ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

। ಅಕ್ಟೋಬರ್ । 31 । 2013 7

ಬೆಂಗಳೂರು

## 4 ತಿಂಗಳಲ್ಲಿ 'ಸಕಾಲ'ಕ್ಕೆ ಐ.ಎಸ್.ಒ. ಮಾನ್ಯತೆ



ಬೆಂಗಳೂರು, ಅ. 29: ಸಕಾಲ ಯೋಜನೆಯಡಿ ನೀಡಲಾಗುತ್ತಿರುವ ಸೇವೆಗಳಿಗೆ ಐ.ಎಸ್.ಒ. 9001 ಪ್ರಮಾಣಪತ್ರವನ್ನು ಮುಂದಿನ ನಾಲ್ಕು ತಿಂಗಳಲ್ಲಿ ನೀಡಲಾಗುವುದೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಎಸ್.ವಿ.ರಂಗನಾಥ್ ತಿಳಿಸಿದರು.

'ಸಕಾಲ' ಯೋಜನೆಯ ಸೆಪ್ಟೆಂಬರ್ ಮಾಹೆಯ ವರದಿಯನ್ನು ಬುಧವಾರ ಬಿಡುಗಡೆ ಮಾಡಿ ಮಾತನಾಡುತ್ತಾ ಈ ವಿಷಯ ತಿಳಿಸಿ, ಭಾರತೀಯ ಗುಣಮಟ್ಟ ಮಂಡಳಿಯ ತಂಡವೊಂದು ಭಾರತ ಸರ್ಕಾರದ ಸಚಿವಾಲಯದ ಕಾರ್ಯಕ್ರಮ ನಿರ್ವಹಣಾ ತಂಡದ ನೆರವು ಪಡೆದು ಐ.ಎಸ್.ಒ. ಪ್ರಮಾಣಪತ್ರ ದೊರೆಯಲು ನೆರವು ನೀಡಲಿದೆ. ಮೊದಲ ಹಂತದಲ್ಲಿ ಕಂದಾಯ, ಸಾರಿಗೆ, ಆಹಾರ, ವಾಣಿಜ್ಯ ತೆರಿಗೆ ಮತ್ತು ನಗರಾಭಿವೃದ್ಧಿ ಇಲಾಖೆಗಳನ್ನು ಒಳಗೊಳ್ಳಲಿದೆ ಎಂದು ತಿಳಿಸಿದರು.

'ಸಕಾಲ' ಮಿಷನ್ ನಿರ್ದೇಶಕರಾದ ಡಾ: ಶಾಲಿನಿ ರಜನೀಶ್ ಮಾತನಾಡಿ, 'ಸಕಾಲದ ಆನ್‌ಲೈನ್ ಸೇವೆಗಳು ಪ್ರಾರಂಭವಾದಾಗಿನಿಂದ, ಸ್ವೀಕೃತಿಗಳನ್ನು ಆರಂಭಿಸಲು ಸುಮಾರು 3000 ಅರ್ಜಿಗಳು ಸ್ವೀಕೃತವಾಗಿದ್ದು, ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಅನುಮೋದನೆಯ ವಿವಿಧ ಹಂತದಲ್ಲಿವೆ' ಎಂದರು.

ಕಳೆದ ಎರಡು ತಿಂಗಳಲ್ಲಿ ಆಗಿರುವ ಉತ್ತಮ ಬೆಳವಣಿಗೆ ಇದಾಗಿದೆ. ಸೆಪ್ಟೆಂಬರ್ ತಿಂಗಳ ಅಂತ್ಯದಲ್ಲಿ ಸ್ವೀಕೃತವಾದ 3,48,15,736 ಅರ್ಜಿಗಳಲ್ಲಿ 3,39,09,912 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, 93 ಅರ್ಜಿಗಳು ಬಾಕಿ ಇವೆ. ಈವರೆಗೆ 207 ಪ್ರಕರಣಗಳಲ್ಲಿ ಪರಿಹಾರ ಶುಲ್ಕವನ್ನು ನೀಡಲಾಗಿದೆ. ಚಿಕ್ಕಬಳ್ಳಾಪುರ, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳು ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಪಡೆದರೆ, ಚಿಕ್ಕಮಗಳೂರು, ಯಾದಗಿರಿ ಮತ್ತು ಬೆಂಗಳೂರು ಜಿಲ್ಲೆಗಳು ಕ್ರಮವಾಗಿ 28, 29 ಮತ್ತು 30 ನೇ ಸ್ಥಾನಗಳಿಸಿಕೊಂಡಿವೆ" ಎಂದು ಡಾ: ಶಾಲಿನಿ ರಜನೀಶ್ ಹೇಳಿದರು. ನಿಯೋಜಿತ ಮುಖ್ಯ ಕಾರ್ಯದರ್ಶಿ ಕೌಶಿಕ್ ಮುಖರ್ಜಿ, ಎಲ್ಲ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ವಿವಿಧ ಇಲಾಖೆಗಳ ಮುಖ್ಯಸ್ಥರು ಹಾಜರಿದ್ದರು.

* * *

Department of Printing, Stationery and Publications, Bangalore